(2)

ಅಚಲ

ಸಂಪುಟ - 13
ಸಂಚಿಕೆ - 1

ಮಾಸಿಕ

ಮಾರ್ಚ್ 1999

ಒಳಪುಟಗಳಲ್ಲಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಪ್ರಕಾಶಕರು –
ಜಾಗೃತಿ ಮಹಿಳಾ
ಅಧ್ಯಯನ ಕೇಂದ್ರ,
ಬೆಂಗಳೂರು

ಗಮನಿಸಿ

ಅಚಲ ವಿಳಾಸ

ಬದಲಾಗಿದೆ

ಸಂಪಾದಕರು
ಅಚಲ
713, ವಿಜಯಮ್ಯಾನಶನ್
ಮೊದಲ ಮೇನ್
ಆರ್.ಪಿ.ಸಿ. ಲೇಔಟ್
ಬೆಂಗಳೂರು - 560 040

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕು.

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/- ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು.

ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು

ಬದಲಾದ ವಿಳಾಸಗಳನ್ನು ದಯವಿಟ್ಟು ಬರೆದು ತಿಳಿಸಿ.

Statement about ownership and other particulars about Newspaper ACHALA

Form IV (see Rule 8)

1. Place of Publication	:	Bangalore, Karnataka State
2. Periodicity of Publication	:	Monthly
3. Printer's Name, Address	:	Lipi Mudrana, Gandhibazar, Basavanagudi, Bangalore - 4
4. Publisher's Name	:	Dr. G. Ramakrishna for Jagruthi Mahila Adhyayana Kendra, Bangalore
Nationality	:	Indian
Address	:	713, Vijaya Mansion, I Main, R.P.C. Layout, Bangalore - 560 070
5. Editor's Name	:	N. Gayathri
Nationality	:	Indian
Address	:	713, Vijaya Mansion, I Main, R.P.C. Layout, Bangalore - 560 040
6. Name & Address of individuals who own the news paper	:	Jagruthi Mahila Adhyayana Kendra 713, Vijaya Mansion, I Main, R.P.C. Layout, Bangalore - 560 040

I, Dr. G. Ramakrishna hereby declare that the particulars given above are true to the best of my knowledge and belief.

Bangalore
Date : 1-3-99

Sd/-
G. Ramakrishna

ಹೆಣ್ಣಿನ ಕಾರ್ಯವ್ಯಾಪ್ತಿಗೆ, ವ್ಯಕ್ತಿತ್ವಕ್ಕೆ ಸಂದ ಗೌರವ

'ಉದ್ಯೋಗಂ ಪುರುಷ ಲಕ್ಷಣಂ' ಎನ್ನುತ್ತದೆ ನಮ್ಮ ಭಾರತೀಯ ಸಮಾಜ. ಆದರೂ ಇಲ್ಲಿ ಅನಾದಿಕಾಲದಿಂದಲೂ ಪುರುಷನೊಡನೆ ಮಹಿಳೆಯೂ ದುಡಿಯುತ್ತಲೇ ಬಂದಿದ್ದಾಳೆ. 20ನೇ ಶತಮಾನದಲ್ಲಂತೂ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಲೇ ನಡೆದಿದೆ. ಈಗ ಭಾರತದಲ್ಲಿ ಒಟ್ಟು 90 ಮಿಲಿಯನ್ ದುಡಿಯುವ ಮಹಿಳೆಯರಿದ್ದಾರೆ. ಈ ದುಡಿಮೆಯ ರಂಗದಲ್ಲಿ ಹೆಣ್ಣಾಗಿ ಹುಟ್ಟಿದ ಕಾರಣದಿಂದಲೇ ಮಹಿಳೆ ಎದುರಿಸುತ್ತಿರುವ ಸಮಸ್ಯೆಗಳು ಹಲವಾರಿದೆ. ಅದು ರೂಪನ್ ಬಜಾಜ್‌ನಂತಹ ಪೋಲಿಸ್ ಅಧಿಕಾರಿಣಿಯಿಂದ ಹಿಡಿದು ಸ್ವಯಂ ಸೇವಕಿಯಾಗಿ ಸಾಥಿನ್ ಕೆಲಸ ಮಾಡುತ್ತಿದ್ದ ಭಾಂವ್ರಿದೇವಿಯವರೆಗೂ ಲೈಂಗಿಕ ಭಯೋತ್ಪಾದನೆ ಹಲವು ಸ್ತರದಲ್ಲಿ ನಡೆಯುತ್ತಲೇ ಬಂದಿದೆ. ಇದುವರೆಗೂ ಈ ದಿಕ್ಕಿನಲ್ಲಿ ನಮ್ಮ ಕಾನೂನು ವಿಶೇಷವಾಗಿ ಕಾರ್ಯನಿರ್ವಹಿಸಲೇ ಇಲ್ಲ. ಈಗ ತಡವಾಗಿಯಾದರೂ ನಮ್ಮ ಕಾನೂನು ಈ ದಿಸೆಯತ್ತ ಕಣ್ತೆರೆದಿದೆ. ಕಳೆದ ವರ್ಷಗಳಲ್ಲಿ ಸುಪ್ರೀಂಕೋರ್ಟು ದುಡಿಮೆಯ ಸ್ಥಳದಲ್ಲಿ ಹೆಣ್ಣಿಗಾಗುವ ಕಿರುಕುಳವನ್ನು ಕುರಿತಂತೆ ತನ್ನ ಒಂದು ತೀರ್ಪಿನಲ್ಲಿ ಕೆಲವು ನಿರ್ದೇಶನಗಳನ್ನು ಕೊಟ್ಟಿದೆ. ಭಾರತೀಯ ಸಮಾಜದ ದುಡಿಯುವ ಮಹಿಳೆ ಸಮುದಾಯಕ್ಕೆ ಇದೊಂದು ಚರಿತ್ರಾರ್ಹ ತೀರ್ಪೇ ಹೌದು.

ಇಲ್ಲಿಯವರೆಗೂ ಲೈಂಗಿಕ ಕಿರುಕುಳದಿಂದ ತೊಂದರೆಗೀಡಾಗುತ್ತಿದ್ದ ಮಹಿಳೆಯರು ಪರಿಹಾರಕ್ಕೆ ನ್ಯಾಯಕ್ಕಾಗಿ ಕೋರ್ಟು ಕಛೇರಿಗಳಿಗೆ ಅಲೆಯಬೇಕಿತ್ತು. ನ್ಯಾಯಾಲಯದ ನಿಧಾನ ನಡೆಯಲ್ಲಿ ನ್ಯಾಯ ಸಿಕ್ಕುತ್ತಿದ್ದುದೆಂದೊ ! ಅದರೊಂದಿಗೆ ಅಪಾರ ಖರ್ಚು. ಸಮಯದ ವ್ಯರ್ಥ ವಿನಿಯೋಗ. ಜೊತೆಗೆ ನಿರಂತರ ಮಾನಸಿಕ ಹಿಂಸೆ. ಈ ಎಲ್ಲ ಅಂಶಗಳ ಹಿನ್ನಲೆಯಲ್ಲಿ ಲೈಂಗಿಕ ಕಿರುಕುಳವನ್ನು ಅನುಭವಿಸುವುದೇ ಅದರ ವಿರುದ್ಧ ಹೋರಾಡುವುದಕ್ಕಿಂತ ಮೇಲು ಎಂಬಂತಹ ಭಾವ ಮಹಿಳೆಯರಲ್ಲಿ ಮೂಡುತ್ತಿದ್ದರೆ ಆಶ್ಚರ್ಯವಿಲ್ಲ. ಆದರೆ ಇತ್ತೀಚಿನ ಸುಪ್ರೀಂಕೋರ್ಟಿನ ತೀರ್ಪಿನಿಂದಾಗಿ ದುಡಿಯುವ ಸ್ಥಳದಲ್ಲಿ ನಡೆಯಬಹುದಾದ ಲೈಂಗಿಕ ಕಿರುಕುಳದಲ್ಲಿ ಮಾಲೀಕ ಹಿಂದಿನಂತೆ ತನಗೆ ಸಂಬಂಧವಿಲ್ಲವೆಂದು ಕೈತೊಳೆದುಕೊಳ್ಳಲು ಸಾಧ್ಯವಿಲ್ಲ. ಲೈಂಗಿಕ ಕಿರುಕುಳ ಅಧಿಕಾರಿಯಿಂದ ನಡೆಯುತ್ತಿರಲಿ. ಸಹೋದ್ಯೋಗಿಗಳಿಂದ ನಡೆಯುತ್ತಿರಲಿ. ಇಲ್ಲವೇ ಕಛೇರಿಗೆ ಬರುವ ಹೊರಗಿನ ಗ್ರಾಹಕರಿಂದ ನಡೆಯುತ್ತಿರಲಿ. ಎಲ್ಲ ಸಂದರ್ಭಗಳಲ್ಲೂ ಮಹಿಳೆಗೆ ನ್ಯಾಯದೊರಕಿಸಿಕೊಡುವ ಜವಾಬ್ದಾರಿ ಆಡಳಿತ ವರ್ಗದ್ದೇ.

ಈ ಚಾರಿತ್ರಿಕ ತೀರ್ಪಿನ ಲಾಭ ಪಡೆದ ಎರಡು ಪ್ರಕರಣಗಳು ಇಂದು ನಮ್ಮ ಮುಂದಿವೆ. ಇದು ಹೋರಾಟದ ಹಾದಿಯಲ್ಲಿರುವ ದುಡಿಯುವ ಮಹಿಳೆಗೆ ಭರವಸೆಯನ್ನು ಮತ್ತು ಆತ್ಮವಿಶ್ವಾಸವನ್ನು ತುಂಬುವುದರಲ್ಲಿ ಆಶ್ಚರ್ಯವಿಲ್ಲ. ಇಬ್ಬರು ಮಕ್ಕಳ ತಾಯಿಯಾದ ಶೆಹನಾಜ್ ಸಾನಿ ಸೌದಿ ಅರೇಬಿಯನ್ ಏರ್‌ಲೈನ್ಸ್‌ನಲ್ಲಿ ಗಗನಸಖಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವಳು ತನ್ನ ಮೇಲಣ ಅಧಿಕಾರಿಯ ಲೈಂಗಿಕ ದುರ್‌ವರ್ತನೆಯನ್ನು ತಿರಸ್ಕರಿಸಿ ಪ್ರತಿಭಟಿಸಿದಾಗ ಕೆಲಸ ಕಳೆದುಕೊಂಡಳು. ನ್ಯಾಯಕ್ಕಾಗಿ ನ್ಯಾಯಾಲಯದ ಕದ ತಟ್ಟಿದಳು. ಬಿದ್ದವಳಿಗೆ ಮತ್ತೊಂದು ಗುದ್ದು ಎಂಬಂತೆ ಅವಳ ಪತಿ ಅವಳ ವಿರುದ್ಧವಾಗಿ ಸೌದಿ ಅರೇಬಿಯನ್ ಏರ್‌ಲೈನ್ಸ್‌ನೊಂದಿಗೆ ಕೈಜೋಡಿಸಿಯಾಗಿತ್ತು. ನ್ಯಾಯಾಲಯದ ನಿಧಾನ ನಡೆಯ ಹದಿಮೂರು ವರ್ಷಗಳ ಹೋರಾಟದ ನಂತರ ಮುಂಬೈ ಹೈಕೋರ್ಟ್ ಸುಪ್ರೀಂಕೋರ್ಟಿನ ತೀರ್ಪಿನನ್ವಯ ಮಾಡಿ ಶೆಹನಾಜ್‌ಳಿಗೆ ನ್ಯಾಯ ದೊರಕಿಸಿದೆ. ಅವಳನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವುದಷ್ಟೇ ಅಲ್ಲದೆ ಇಷ್ಟು ದಿನ ಅವಳು ಅನುಭವಿಸಿದ ನಷ್ಟಕ್ಕೆ ಪರಿಹಾರವನ್ನು ನೀಡಿದೆ.

ಇದೇ ಹಾದಿಯಲ್ಲಿ ಮತ್ತೊಂದು ಹೆಜ್ಜೆ. ಏಪರೆಲ್ ಎಕ್ಸ್‌ಪೋರ್ಟ್ ಪ್ರೊಮೋಷನ್ ಕೌನ್ಸಿಲ್ ಛೇರ್‌ಮನ್‌ನ ಆಪ್ತಕಾರ್ಯದರ್ಶಿ ಎ.ಕೆ. ಚೋಪ್ರಾನ ವಜಾವನ್ನು ಮುಂಬೈ ಹೈಕೋರ್ಟು ಎತ್ತಿಹಿಡಿದಿದೆ. ಮಹಿಳಾ ಟೈಪಿಸ್ಟ್‌ಳೊಂದಿಗೆ ಎ.ಕೆ. ಚೋಪ್ರಾ ಲೈಂಗಿಕವಾಗಿ ಕಿರುಕುಳ ಉಂಟುಮಾಡಿದ್ದೇ ಚೋಪ್ರಾರವರ ವಜಾಕ್ಕೆ ಕಾರಣವಾಗಿತ್ತು.

ಈ ಎಲ್ಲ ಘಟನೆಗಳ ಹಿನ್ನೆಲೆಯಲ್ಲಿ ಕುಟುಂಬದ ಹೊರಗೆ ದುಡಿಯಲು ಬಂದ ಹೆಣ್ಣನ್ನು ಗೌರವಯುತವಾಗಿ ಕಾಣಬೇಕೆಂಬ ಆಶಯದೊಂದಿಗೆ ಅವಳ ಕಾರ್ಯವ್ಯಾಪ್ತಿಯನ್ನು ಹಿಗ್ಗಿಸುವ. ವ್ಯಕ್ತಿತ್ವದ ಆಯಾಮಗಳನ್ನು ವಿಶಾಲಗೊಳಿಸುವ ಆರೋಗ್ಯಕರ ನಿಲುವಿದೆ. ಆದ್ದರಿಂದ ಆರೋಗ್ಯವಂತ ಸಮಾಜದ ಎಲ್ಲರೂ ಸ್ವಾಗತಿಸಿ. ಸ್ವೀಕರಿಸಿ. ಪ್ರಸಾರ ಮಾಡಬೇಕಾದ ವಿಷಯ ಇದಾಗಿದೆ.

- ಎನ್. ಗಾಯತ್ರಿ

ಜಗತ್ತಿನ ಮೊಟ್ಟ ಮೊದಲ ಕಂಪ್ಯೂಟರ್ ಪ್ರೋಗ್ರಾಮರ್ - ಆಡಾ ಅಗುಸ್ಟಾ ಲವ್ಲೇಸ್

- ನೇಮಿಚಂದ್ರ

ಆಡಾ ಅಗುಸ್ಟಾ ಜಗತ್ತಿನ ಮೊಟ್ಟ ಮೊದಲ ಕಂಪ್ಯೂಟರ್ ಪ್ರೋಗ್ರಾಮರ್. ಈಕೆ ಮೇಧಾವಿ ಗಣಿತಜ್ಞೆ, ಗಣಕ ಯಂತ್ರಗಳನ್ನು ಕಂಡು ಹಿಡಿದ ಚಾರ್ಲ್ಸ್ ಬ್ಯಾಬೇಜನ ಆತ್ಮೀಯ ಸ್ನೇಹಿತೆ. ಆಡಾ ಆಗುಸ್ಟಾ ಇಂದು ಪ್ರಸಿದ್ಧಳಾಗಿದ್ದರೆ. ಅದಕ್ಕೆ ನಾವಿರುವ ಕಂಪ್ಯೂಟರ್ ಯುಗವೇ ಕಾರಣ. 'ಆಡಾ' ಇಂದು ಕಂಪ್ಯೂಟರ್ ಭಾಷೆಯಾಗಿ ಚಿರಪರಿಚಿತವಿದೆ. ೧೯೭೦ರ ದಶಕದ ಕೊನೆಗೆ. ಅಮೆರಿಕೆಯ ರಕ್ಷಣಾ ವಿಭಾಗವು ಮಿಲಿಟರಿ ಉಪಯೋಗಕ್ಕಾಗಿ ಕಂಡುಹಿಡಿದ ಕಂಪ್ಯೂಟರ್ ಭಾಷೆಗೆ ಆಡಾಳ ಹೆಸರಿಟ್ಟು ಗೌರವಿಸಿತು. ೩೬ನೇ ವಯಸ್ಸಿಗೇ ಕ್ಯಾನ್ಸರಿಗೆ ತುತ್ತಾದ ಆಡಾಳನ್ನು ಇತಿಹಾಸ ಹೆಚ್ಚು ಕಮ್ಮಿ ಮರೆತೇ ಬಿಟ್ಟಿತ್ತು. ಇದೀಗ ಆದುನಿಕ ಜಗತ್ತಿನಲ್ಲಿ ಕಂಪ್ಯೂಟರುಗಳು ಪ್ರಮುಖ ಪಾತ್ರ ವಹಿಸಿದ್ದು. ಗಣಿತ ಮತ್ತು ವಿಜ್ಞಾನಕ್ಕೆ ಆಡಾ ನೀಡಿದ ಕೊಡುಗೆಯತ್ತ ವಿಜ್ಞಾನಿಗಳ ಗಮನ ಹರಿದಿದೆ. ಆಕೆ ತನ್ನ ಕಾಲದಿಂದ ಒಂದು ಶತಮಾನದಷ್ಟು ಮುಂದಕ್ಕೆ ಯೋಚಿಸಿ. ಕಂಪ್ಯೂಟರ್‌ಗಳಿಗೆ ಕಾರ್ಯ ನಿರ್ದೇಶಿಸುವ ರೀತಿಯನ್ನು ಅವುಗಳೊಡನೆ ಸಂಭಾಷಿಸುವ ಬಗೆಯನ್ನು ವಿವರಿಸಿದ್ದಳು.

ಡಿಸೆಂಬರ್ ೧೦, ೧೮೧೫ರಂದು ಆಡಾ ಲಂಡನ್ನಿನಲ್ಲಿ ಹುಟ್ಟಿದಳು. ಆಕೆಯ. ತಾಯಿ ಆನಾಬೆಲ್ಲಾ ಮಿಲ್ಬ್ಯಾಂಕ್, ತಂದೆ ಇಂಗ್ಲೆಂಡಿನ ಸುಪ್ರಸಿದ್ಧ ಕವಿ ಲಾರ್ಡ್ ಬೈರನ್, ಅವರು ವಿವಾಹವಾದ ಒಂದು ವರ್ಷಕ್ಕೆ ಆಡಾ ಹುಟ್ಟಿದ್ದಳು. ಆದರೆ ಅವರದು ಸುಖೀ ದಾಂಪತ್ಯವಲ್ಲ. ಉತ್ಕಟ ವ್ಯಕ್ತಿತ್ವದ ಬೈರನನ ಒಂದಿಷ್ಟು ವಿಚಿತ್ರ ಹಾಗೂ ಬಹಳಷ್ಟು ಚಂಚಲ ಸ್ವಭಾವ ಅವರ ವೈವಾಹಿಕ ಬದುಕನ್ನು ಕದಡಿತ್ತು. ತಾಯಿ ಶಾಂತ ಸ್ವಭಾವದ ವಿಚಾರವಂತೆ. ಆಕೆಗೆ ಗಣಿತದಲ್ಲಿ ಬಹಳ ಆಸಕ್ತಿ. ಆಡಾ ಹುಟ್ಟಿದ ಕೆಲವೇ ತಿಂಗಳು. ಬೈರನ್ ಆನಾಬೆಲ್ಲಾಗೆ ಮಗುವನ್ನು ಕರೆದು ಕೊಂಡು ತನ್ನ ತವರಿಗೆ ಹೋಗುವಂತೆ ಅಪ್ಪಣೆ ಮಾಡಿದ. ತನಗೆ ಹುಟ್ಟಿದ ಮಗಳನ್ನು ಅಲ್ಲಿಂದಾಚೆ ಅವನೆಂದು ನೋಡಲು ಹೋಗಲಿಲ್ಲ. ತಾಯಿ ತನ್ನ ಮಗುವನ್ನು ಬಹುವಾಗಿ ಪ್ರೀತಿಸಿದವಳು. ತನ್ನ ಮುಂದಿನ ಬದುಕನ್ನೆಲ್ಲಾ ಏಕಾಂಗಿಯಾಗಿ ಮಗಳನ್ನು ಬೆಳೆಸುವುದರಲ್ಲಿ ಕಳೆದಳು. ತಮ್ಮ ಮಗುವಿನತ್ತ ಗಂಡನಿಗಿರುವ ಅಸಡ್ಡೆ. ಅನಾಸಕ್ತಿ ಆಕೆಯನ್ನು ಬಹುವಾಗಿ ನೋಯಿಸಿದ್ದವು. ಸಾಲದ್ದಕ್ಕೆ ಬೈರನ್ ಆಡಾಳನ್ನು ಕರೆದೊಯ್ದು ತನ್ನ ಅಕ್ಕನ ಕೈಯಲ್ಲಿ ಬೆಳೆಸುವೆನೆಂದು ಸದಾ ಹೆದರಿಸುತ್ತಿದ್ದುದುಂಟು. ಅಂದಿನ ಕಾನೂನಿನಲ್ಲಿ ತಂದೆಯಾದವನಿಗೆ ಆ ಹಕ್ಕು ಇತ್ತು. ವಿವಾಹದ ಹೊರಗೆ ಹುಟ್ಟಿದ ಕೂಸಿನ ಏಕೈಕ ಮಗು. ಆ ಮಗುವನ್ನೆಲ್ಲಿ ಅವ ತಂದೆಯ ಹಕ್ಕಿನಿಂದ ಕಿತ್ತುಕೊಂಡು ಹೋಗುವನೋ ಎಂಬ ಭಯ ಸದಾ ಕಾಡಿ. ತಾಯಿ ಆಡಾಳನ್ನು ಮತ್ತೂ ರಕ್ಷಿಸಿ ಬೆಳೆಸಿದಳು. ಆದರೆ ಆತನೆಂದೂ ಮಗಳನ್ನು ನೋಡಲು ಬರಲಿಲ್ಲ. ಅವಳನ್ನು ಕೊಂಡೊಯ್ಯುವ ಮಾತು ದೂರವೇ ಉಳಿಯಿತು. ಬೈರನ್ ೧೮೨೪ರಲ್ಲಿ ಗ್ರೀಸನಲ್ಲಿ ಸತ್ತಾಗ ಆಡಾ ಎಂಟು ವರ್ಷದ ಮಗು. ತನ್ನ ಮರಣಶಯ್ಯೆಯಲ್ಲಿ ಮಗಳ ನೆನಪಾಗಿತ್ತು. ತನ್ನ ಮಗಳನ್ನು ಕುರಿತು ಕೇಳಿದಾಗ ಪತ್ನಿ ಬರೆದಿದ್ದಳು, 'ಆಡಾ ಸಂತಸದ ಹುಡುಗಿ. ಖುಷಿಯ ಸ್ವಭಾವದವಳು. ಸೂಕ್ಷ್ಮ ಅವಲೋಕನ ಶಕ್ತಿ ಉಳ್ಳವಳು. ಅವಳಿಗೆ ಕಲ್ಪನಾ ಶಕ್ತಿ ಇಲ್ಲವೆಂದಲ್ಲ, ಚಂದವಾಗಿ ಚಿತ್ರ ಬಿಡಿಸುತ್ತಾಳೆ. ಆದರೆ ಅವಳ ಮುಖ್ಯ ಆಸಕ್ತಿ ಯಾಂತ್ರಿಕ ವಿಷಯಗಳಲ್ಲಿದೆ. ದೋಣಿಗಳು ಹಡಗುಗಳು ತಯಾರಾಗುವ ರೀತಿ ಇವೆಲ್ಲವೂ ಆಕೆಯ ಆಸ್ಥೆಯ ವಿಷಯಗಳು. ಎಂದು ಬರೆದಿದ್ದ ಆ ಪತ್ರದಲ್ಲಿ ಎಳೆಯ ಆಡಾಳ ಬಾಲ್ಯದ ದಿನಗಳ ಇಣುಕು ನೋಟ ಸಿಗುತ್ತದೆ.

ಆಡಾಳಿಗೆ ಬಾಲ್ಯ - ಕಿಶೋರದಲ್ಲಿಯೇ ಗಣಿತದತ್ತ

ಆಸಕ್ತಿ ಮೂಡಿತ್ತು. ಆಕೆಯ ಆ ಆಸ್ತೆ ಮತ್ತು ಪ್ರತಿಭೆಯನ್ನು ಗುರುತಿಸಿದ ತಾಯಿ ಪ್ರೋತ್ಸಾಹಿಸಿದಳು. ಸ್ವತಃ ಗಣಿತದಲ್ಲಿ ಆಸಕ್ತಿ ಇದ್ದ ತಾಯಿಗೆ ಅದು ವಿಪರೀತವಾಗಿ ಕಾಣಲಿಲ್ಲ. ಬೈರನ್ ಆಕೆಯನ್ನು ಒಮ್ಮೆ 'ಪ್ರಿನ್ಸೆಸ್ ಆಫ್ ಪ್ಯಾರಲೆಲೋಗ್ರಾಮ್' ಎಂದು ಕರೆದಿದ್ದ. ಆಡಾ ಹದಿನೇಳರ ವಯಸ್ಸಿನವಳಿದ್ದಾಗ ಮೇಧಾವಿ ಗಣಿತಜ್ಞೆ ಮೇರಿ ಸೊಮರವಿಲಗೆ ಪತ್ರ ಬರೆದಳು. ಮೇರಿ ಆಕೆಯ ಆದರ್ಶವಾಗಿದ್ದಳು. ಆಕೆ ಆಡಾಳನ್ನು ಗಣಿತಜ್ಞಳಾಗುವಂತೆ ಪ್ರೊತ್ಸಾಹಿಸಿದಳು.

ಮೇಲ್ವರ್ಗದಲ್ಲಿ ಹುಟ್ಟಿದ ಆಡಾಳ ಬದುಕು ಆ ವರ್ಗದ ಹೆಣ್ಣು ಮಕ್ಕಳಿಗಿಂತ ಭಿನ್ನವೇನಿರಲಿಲ್ಲ. ಶಿಶಿರದ ದಿನಗಳನ್ನು ಲಂಡನ್ನಿನ ಸಂಗೀತ ಕಾರ್ಯಕ್ರಮಗಳಲ್ಲಿ ನಾಟಕಗಳಲ್ಲಿ, ಔತಣಕೂಟದಲ್ಲಿ ಕಳೆಯುತ್ತಿದ್ದಳು. ಆಡಾ ಈ ಎಲ್ಲದರಲ್ಲೂ ಭಾಗಿಯಾಗುತ್ತಿದ್ದರೂ ಆಕೆಯ ಆಸಕ್ತಿಗಳು ಅಷ್ಟಕ್ಕೇ ಸೀಮಿತವಾಗಿರಲಿಲ್ಲ ಎಂಬುದೇ ದೊಡ್ಡ ವಿಶೇಷ. ಗಣಿತಜ್ಞರಾಗುವುದು ಹೆಂಗಸರ ಪಾತ್ರಗಳಲ್ಲಿ ಒಂದಾಗಿ ಕಾರಣ ಹೊರ ಸಮಾಜದಲ್ಲಿ ಆಡಾ ಉಳಿದ ಹೆಣ್ಣು ಮಕ್ಕಳಿಗಿಂತ ಹೆಚ್ಚಿನ ಪ್ರೊತ್ಸಾಹವನ್ನೇನೂ ಪಡೆಯಲಿಲ್ಲ. ಆಡಾ ಪೇಯಸ್ಲಿಯ 'ಜಾಮಿತಿ' ಯಿಂದ ಸ್ವತಃ ಕಲಿತಳು. ನಂತರ ವಿಲಿಯಂ ಫ್ರೆಂಡನಿಂದ ಗಣಿತ ಮತ್ತು ಖಗೋಳ ಶಾಸ್ತ್ರದ ಪಾಠ ಹೇಳಿಸಿಕೊಂಡಳು.

ಆಡಾಗೆ ಹತ್ತೊಂಬತ್ತು ವರ್ಷ, ಆಕೆಯ ವಿವಾಹ ಲವಲೇಸನ 'ಅರ್ಲ್' ಆಗಲಿದ್ದ ವಿಲಿಯಂ, ಲಾರ್ಡ್ ಕಿಂಗ್ ಜೊತೆ ನೆರವೇರಿತು. ವಿಲಿಯಂ ಆಕೆಗಿಂತ ಹತ್ತು ವರ್ಷಕ್ಕೆ ದೊಡ್ಡವನಿದ್ದ. ಆಡಾಗೆ ಪತಿಯೊಡನೆ ಪ್ರೀತಿಯ ಸಾಂಗತ್ಯವಿತ್ತು. ಪತ್ನಿಯ ಗಣಿತದ ಅಧ್ಯಯನದಲ್ಲಿ ಆತನಿಗೂ ಆಸಕ್ತಿ ಇದ್ದು, ಆಕೆಯ ಕೆಲಸವನ್ನು ಪೂರ್ಣ ಬೆಂಬಲಿಸಿದ. ಬೆರಳಚ್ಚು ಯಂತ್ರವಿಲ್ಲದ ಆ ಕಾಲದಲ್ಲಿ ಎಷ್ಟೋ ಬಾರಿ ಆಡಾ ಬರೆದುದನ್ನು ಶಾಹಿಯಿಂದ ನಕಲು ಮಾಡಿ ಕೊಡುತ್ತಿದ್ದ. ಆಡಾ ಪತಿಗಿಂತ ಹೆಚ್ಚು ಬುದ್ಧಿವಂತಳೂ, ಪ್ರತಿಭಾವಂತಳೂ, ಮುಂದೆ ಹೆಚ್ಚು ಪ್ರಸಿದ್ಧಳೂ ಆದದ್ದು, ಅವರ ನಡುವೆ ಯಾವ ಬಗೆಯ ತೊಡಕನ್ನು ತಂದು ಹಾಕಲಿಲ್ಲ. ತನ್ನ ಪತ್ನಿಯ ಪ್ರತಿಭೆಯನ್ನು ಒಪ್ಪಿಕೊಂಡು,ಬೆಂಬಲಿಸಿದ ವಿಲಿಯಂ, ಆಕೆಯ ಸಾಧನೆಯನ್ನು ಕುರಿತು ಹೆಮ್ಮೆ ಪಡುತ್ತಿದ್ದ. ಅವರಿಗೆ ಇಬ್ಬರು ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು. ಮಗಳು ಆನೆ ಬ್ಲೌನ್ ಬಾಲ್ಯದಲ್ಲಿ ಗಣಿತದತ್ತ ಸಾಕಷ್ಟು ಪ್ರತಿಭೆ ತೋರಿಸಿದವಳು. ಮುಂದೆ ಸುಪ್ರಸಿದ್ಧ ಅರೇಬಿಕ್ ವಿದ್ವಾಂಸೆಯಾದವಳು.

ಮನೆಯಲ್ಲಿ ಇಷ್ಟೆಲ್ಲಾ ಪ್ರೊತ್ಸಾಹ, ಬೆಂಬಲದ ವಾತಾವರಣವಿದ್ದರೂ, ಆಕೆಯಿದ್ದ ಕಾಲದ ಕಾರಣದಿಂದಾಗಿ ಆಡಾಳ ಪ್ರತಿಭೆ ಅರಳ ಬೇಕಾದಷ್ಟು ಅರಳಲು ಅವಕಾಶಗಳಿರಲಿಲ್ಲ. ಸಾಮಾನ್ಯ ನಂಬಿಕೆಗಳು ಸಮಾಜದ ಪೂರ್ವಾಗ್ರಹಗಳು ಹೆಣ್ಣು ಮಕ್ಕಳ ಪ್ರತಿಭೆಯನ್ನು ಆದಷ್ಟು ಮೊಟಕುಗೊಳಿಸುವಲ್ಲಿ ಯಶಸ್ವಿಯಾಗಿದ್ದವು. ಆಡಾಗೆ ಮನೆಯಲ್ಲಿ ಗಣಿತದ ಪಾಠ ಹೇಳಿಕೊಟ್ಟ ಶಿಕ್ಷಕರಲ್ಲೊಬ್ಬರಾದ, ಗಣಿತಜ್ಞ ಆಗಸ್ಟಸ್ ದ ಮೋರ್ಗನ್, ಆಡಾಳಲ್ಲಿ ದೊಡ್ಡ ಗಣಿತಜ್ಞಳಾಗುವ ಲಕ್ಷಣಗಳಿವೆ. ಆಡಾ ತನ್ನ ಈ ಗಣಿತದ ಪ್ರತಿಭೆಯ ಹಿಂದೆ ಬಿದ್ದು ಪೂರ್ಣರೂಪದಲ್ಲಿ ಅದರಲ್ಲಿ ಮಗ್ನಳಾದರೆ, ಮೆದುಳಿಗೆ ವಿಪರೀತದ ಕಸರತ್ತು ಕೊಟ್ಟರೆ ಆಕೆಯ ಆರೋಗ್ಯಕ್ಕೆ ಅದು ತೀರಾ ಅಪಾಯ, ಎಂದು ಎಚ್ಚರಿಸಿ ಆಡಾಳ ತಾಯಿಗೆ ಗುಟ್ಟಾಗಿ ಒಂದು ಪತ್ರ ಬರೆದಿದ್ದ. ಅದೇ ಕಾರಣಕ್ಕೆ ಆತ ಆಡಾಳ ಎದುರಿಗೆಂದೂ ಆಕೆಯ ಪ್ರತಿಭೆಯ ಬಗ್ಗೆ ತನಗಿದ್ದ ಅಭಿಪ್ರಾಯ, ಮೆಚ್ಚುಗೆಯನ್ನು ವ್ಯಕ್ತ ಪಡಿಸಲಿಲ್ಲ. ತನ್ನ ಪ್ರೊತ್ಸಾಹ ಆಕೆಯನ್ನು ಮತ್ತೂ ಉತ್ಕಟವಾಗಿ ಗಣಿತದಲ್ಲಿ ತೊಡಗಿಸಿಬಿಡಬಹುದು, ಅದರಿಂದ ಆಕೆಯ ಆರೋಗ್ಯಕ್ಕೆ ಹಾನಿಯಾಗಬಹುದು ಎಂಬ ಆತಂಕ ಆತನದು! ೨೮ ವರ್ಷದವಳಿದ್ದು ಮದುವೆ - ಮಕ್ಕಳಾಗಿ ಸ್ವತಃ ತಾಯಿಯಾದ ಸಂದರ್ಭದಲ್ಲೂ ಆಡಾಳ ಮೇಲೆ ಇಂಥೆಲ್ಲಾ ನಿಯಂತ್ರಣಗಳಿದ್ದವು.

ಆಡಾ ಗಣಿತಜ್ಞಳು ಮಾತ್ರವಲ್ಲ, ಒಳ್ಳೆಯ ಪತ್ರ ಲೇಖಕಿ. ಈ ಕಾರಣದಿಂದಲೇ ಆಕೆಯ ಮತ್ತು ಚಾರ್ಲ್ಸ್ ಬ್ಯಾಬೇಜನೊಡನೆಯ ಸ್ನೇಹದ ಸವಿವರ ದಾಖಲೆ ಸಿಗುತ್ತದೆ. ಆತನೊಡನೆ ಆಕೆಗೆ ಹದಿನೆಂಟು ವರ್ಷಗಳ ಕಾಲದ ಸ್ನೇಹ-ಸಂಬಂಧವಿತ್ತು. ಈ ಸಮಯದಲ್ಲಿ ಬ್ಯಾಬೇಜ್ ತನ್ನ ಮೊಟ್ಟ ಮೊದಲ ವ್ಯತ್ಯಸ್ತ ಎಂಜಿನ್‌ನ (Different Engine) ವಿನ್ಯಾಸ ಮತ್ತು ತಯಾರಿಕೆಯಲ್ಲಿ ಮುಳುಗಿದ್ದ. ವ್ಯತ್ಯಸ್ತ ಎಂಜಿನಿಗಳು ಕಂಪ್ಯೂಟರಿನ ಮೂಲಯಂತ್ರಗಳು.

೧೮೩೪ರಲ್ಲಿ ಆಡಾ ಚಾರ್ಲ್ಸ್ ಬ್ಯಾಬೇಜನ ಒಂದು ಪ್ರವಚನವನ್ನು ಕೇಳಿದಳು. ಆತನ ವೈಜ್ಞಾನಿಕ ಸಂಶೋಧನೆಗಳಿಂದ ಪ್ರಭಾವಿತಳಾದ ಆಡಾ, ಆತನೊಡನೆ ಕೆಲಸ ಮಾಡಲು ನಿಶ್ಚಯಿಸಿದಳು. ಆಡಾ ಜನವರಿ ೧೮, ೧೮೩೬ರಂದು ಬ್ಯಾಬೇಜನಿಗೆ ಮೊಟ್ಟ ಮೊದಲ ಪತ್ರ ಬರೆದಾಗ ಆಕೆ ಕೇವಲ ಇಪ್ಪತ್ತೊಂದರ ಯುವತಿ. ತನಗೊಬ್ಬರು ಗಣಿತದ ಶಿಕ್ಷಕರನ್ನು ತಿಳಿಸಲು ಕೇಳಿ ಬರೆದ ಉತ್ಸುಕತೆಯ ಉತ್ಸಾಹದ ವಿದ್ಯಾರ್ಥಿಯ ಪತ್ರ ಅದು. ಕೆಲವೇ ವರ್ಷಗಳಲ್ಲಿ ಬ್ಯಾಬೇಜನೊಡನೆ ಆತ್ಮೀಯ ಸ್ನೇಹ ಮುಂದುವರೆದು ಆತನ ಕೆಲಸ ಸಂಶೋಧನೆಗಳಿಗೆ ತನ್ನಿಂದ ಕಿಂಚಿತ್ತು ಸಹಾಯವಾಗುವುದಾದರೆ, ತಾನು ಸದಾ ಸಿದ್ಧ ಎಂದು ತಿಳಿಸಿದ್ದಳು. ಆಡಾ ಮಹತ್ವಾಕಾಂಕ್ಷಿ ಹೆಣ್ಣಷ್ಟೆ ಅಲ್ಲ, ಅಷ್ಟೇ ಗಟ್ಟಿ ನಿರ್ಧಾರದ ವಿಜ್ಞಾನಿಯಾಗಿದ್ದಳು. ಮೊದ ಮೊದಲು ಬ್ಯಾಬೇಜನಿಗೆ ಆಕೆಯತ್ತ ಯಾವ ಆಸಕ್ತಿಯೂ ಇರಲಿಲ್ಲ. ಆತನ ಗಮನ ಸೆಳೆಯಲು ಆಡಾ ಬ್ಯಾಬೇಜನ ಕೆಲಸಕ್ಕೆ ಉಪಯುಕ್ತವಾಗುವ ಇಟಲಿ ಭಾಷೆಯ ಪುಸ್ತಕವೊಂದನ್ನು ಅನುವಾದಿಸಿದಳು. ಆಕೆಯ ಈ ಕೆಲಸದಿಂದ ಖುಷಿ ಪಟ್ಟ ಬ್ಯಾಬೇಜ್ ತನ್ನ ಕೆಲಸದಲ್ಲಿ ನೆರವಾಗಲು ಕೇಳಿಕೊಂಡನು. ಆತನ ಬಹುಳಷ್ಟು ಬಿಜಗಣಿತದ ಸಮಸ್ಯೆಗಳನ್ನು ಸರಳೀಕರಿಸುವುದರಲ್ಲಿ ಆಡಾ ನೆರವಾದಳು. ಅವರ ದುಡಿಮೆಯ ಫಲವಾದ ನಿರ್ದೇಶಕ ಎಂಜಿನ್ ನನ್ನು (Analytical Engine) ವಾಸ್ತವದಲ್ಲಿ ನಿರ್ಮಿಸುವುದು ಅಂದಿನ ಕಾಲಕ್ಕೆ ಅಸಾಧ್ಯವಿತ್ತು. ಅವರು ಈ ಯಂತ್ರದ ಸಿದ್ಧಾಂತವನ್ನು ನಿರೂಪಿಸಿದ್ದರು. ಅದರ ನಿಖರತೆ ಮುಂದಿನ ವರ್ಷಗಳಲ್ಲಿ ಸಾಬೀತಾಗಲಿತ್ತು. ಆಡಾ ತನ್ನ ಗಣಿತದ ಜ್ಞಾನದಿಂದ ಬ್ಯಾಬೇಜನ ಯಂತ್ರಗಳೊಡನೆ ಸಂಪರ್ಕಿಸುವ ವಿಧಾನಗಳನ್ನು ಕಂಡುಹಿಡಿದಳು. ಈ ಯಂತ್ರಗಳನ್ನು 'ಪ್ರೋಗ್ರಾಮ್' ಮಾಡಬಹುದೆಂದು ತಿಳಿಸಿ, ಮೊಟ್ಟ ಮೊದಲ ಉದಾಹರಣೆಗಳನ್ನು ಮುಂದಿಟ್ಟಳು. ವರ್ಷಗಳು ಕಳೆದಂತೆ ಆಡಾ ಬ್ಯಾಬೇಜನ ವಿದ್ಯಾರ್ಥಿಯ ಹಂತದಿಂದ ಬೆಳೆದು ಆತ್ಮವಿಶ್ವಾಸದ ಸಹ-ಉದ್ಯೋಗಿಯಾಗಿ ವಿಕಾಸಗೊಂಡಳು.

೧೮೪೨ರ ಅಕ್ಟೋಬರ್ ಎಲ್. ಎಫ್. ಮೆನೆಬ್ರಿಯಾ ಜಿನೀವದಲ್ಲಿ ಬ್ಯಾಬೇಜನ 'ನಿರ್ದೇಶಕ ಎಂಜಿನ್' ಕುರಿತು ಫ್ರೆಂಚ್ ಭಾಷೆಯಲ್ಲಿ ಪ್ರಬಂಧ ಮಂಡಿಸಿದ. ಆಡಾ ಆ ಪ್ರಬಂಧವನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಲು ಇಚ್ಛಿಸಿದಳು. ಆ ಅನುವಾದದ ಕೆಲಸದಲ್ಲಿ ತನ್ನ ಭಾಷೆಯ ಮೇಲಿನ ಹಿಡಿತವನ್ನು ನೋಡಿ ಸ್ವತಃ ಅಚ್ಚರಿಕೊಂಡಳು. ಅನುವಾದ ಮುಂದುವರೆದಂತೆ, ಅದು ಕೇವಲ ಅನುವಾದವಾಗಿ ಮಾತ್ರ ಉಳಿಯಲಿಲ್ಲ. ಮೂಲ ಪ್ರಬಂದವನ್ನು ವಿಸ್ತರಿಸಿದ ಟಿಪ್ಪಣಿಗಳು ಸೇರಿ ಪ್ರಬಂಧ ಮೂರ್ಪಟ್ಟು ದೊಡ್ಡದಾಗಿತ್ತು. ಕಡೆಗೆ ಬ್ಯಾಬೇಜನಿಗೆ ಅದು ಅನುವಾದವಲ್ಲ, ನಿಜಕ್ಕೂ ಆಕೆಯದೇ ಸ್ವಂತ ಪ್ರಬಂಧ ಎನಿಸಿತ್ತು. ಆದರೆ ಆಡಾ ಒಪ್ಪಲೇ ಇಲ್ಲ. 'ನಾನು ಪ್ರಕಾಶಕರಿಗೆ ಪ್ರಬಂಧದ ಅನುವಾದ ಮಾಡಿಕೊಟ್ಟಿದ್ದೇನೆ. ಅದು ಅನುವಾದವೇ ಹೊರತು, ನನ್ನ ಸ್ವಂತ ಕೃತಿಯಲ್ಲ' ಎಂದಳು. ಆಕೆ ಮತ್ತು ಬ್ಯಾಬೇಜನ ಮಧ್ಯೆ ಈ ಪ್ರಬಂಧ ತಯಾರಿಸುತ್ತಿದ್ದ ಸಮಯದಲ್ಲಿ ಒಂದೇ ಸಮನೆ ಪತ್ರಗಳು ಓಡಾಡಿದವು. ಅನೇಕ ಬಾರಿ ಸೇವಕರ ಮೂಲಕ ತಟ್ಟನೆ ಕೈಯಿಂದ ತಲುಪಿಸಲ್ಪಡುತ್ತಿದ್ದವು. ಪ್ರಂಬಧದ ಕೊನೆ ಕೊನೆಗೆ ಆಡಾ ನಿಜಕ್ಕೂ ಸುಸ್ತಾಗಿದ್ದಳು. ಆಕೆ ತಿದ್ದುಪಡಿಗೆಂದು ಕಳುಹಿಸುತ್ತಿದ್ದ ಹಾಳೆಗಳನ್ನು ಬೇಜವಾಬ್ದಾರಿಯ ಬ್ಯಾಬೇಜ್ ಎಲ್ಲೆಲ್ಲೋ ಇಟ್ಟು ಮರೆಯುತ್ತಿದ್ದ. ಕೆಲವೊಮ್ಮೆ ಯಾವ ಪುಟ ಎಲ್ಲಿ ಬರಬೇಕೋ ಅಲ್ಲಿ ಇರದೆ ಗೊಂದಲವೇಳುತ್ತಿತ್ತು. ಅಂತೂ ಇಂತೂ ಹಸ್ತಪ್ರತಿ ಸಿದ್ಧವಾಯಿತು. ಆದರೆ ಆಡಾ ತನ್ನ ಕೆಲಸಕ್ಕೆ ತನ್ನ ಸಹಿ ಹಾಕುವುದು ಅಷ್ಟು ಸುಲಭವಿರಲಿಲ್ಲ. ಆ ಕಾಲದಲ್ಲಿ ಹೆಂಗಸರು ತಮ್ಮ ಯಾವುದೇ ಬರಹಗಳನ್ನು ತಮ್ಮ ಹೆಸರಿನಡಿ ಬರೆಯುತ್ತಿರಲಿಲ್ಲ. ಅದರಲ್ಲೂ ಶ್ರೀಮಂತ ಮನೆತನದ ಹೆಂಗಸರ ಹೆಸರುಗಳು ಹಾಗೆಲ್ಲ ಹೊರಗೆ ಕಾಣ ಬರುವುದು ಸರಿಯಲ್ಲ ಎಂದು ಭಾವಿಸಿದ್ದ ಕಾಲ. ಆ ಕಾರಣಕ್ಕೆ ಆಡಾ ಕೇವಲ ಎ.ಎಎಲ್ ಎಂದು ಮಾತ್ರ ಸಹಿ ಹಾಕಿದ್ದಳು. ಮುಂದಿನ ಮೂವತ್ತು ವರ್ಷಗಳ ಕಾಲ ಆಕೆಯ ನಿಕಟವರ್ತಿಗಳಿಗೆ ಬಿಟ್ಟರೆ ಉಳಿದವರೆಲ್ಲರಿಗೂ ಎ.ಎ.ಎಲ್. ರಹಸ್ಯವಾಗಿಯೇ ಉಳಿದಿತ್ತು. ಇದೀಗ ಆಡಾ ತಾನು ಬ್ಯಾಬೇಜನಿಗೆ ಬುದ್ಧಿಮತ್ತೆಯಲ್ಲಿ ಸಮಾನಳೆಂದು ತೋರಿಸಿದ್ದಳು. ಬ್ಯಾಬೇಜನೊಡನೆಯ ತನ್ನ ವೈಯಕ್ತಿಕ ಸ್ನೇಹದ ಸಂಬಂಧವನ್ನು ಕೆಡಿಸಿಕೊಳ್ಳದಿದ್ದರೂ ಆತನೊಡನೆ ಮತ್ತೆ ಕೆಲಸ ಮಾಡಲು ಆಡಾ, ಅನೇಕ ನಿರ್ಬಂಧನೆಗಳನ್ನು ಎದುರಿಗಿಟ್ಟಳು. 'ಹಾಳೆಗಳನ್ನು ಎಲ್ಲೆಂದರಲ್ಲಿ ಎಸೆಯೋಲ್ಲ, ಅಷ್ಟು ಅವಸರದಲ್ಲಿ ಮುಗಿಸಿ ಗೊಂದಲ ಎಬ್ಬಿಸಿ

ತಪ್ಪುಗಳನ್ನು ಉಳಿಸೋಲ್ಲ' ಎಂದು ಮಾತು ಕೊಡವಂತೆ ಬ್ಯಾಬೇಜಗೆ ಬರೆದಿದ್ದಳು. 'ಇಷ್ಟೆಲ್ಲ ಆದಮೇಲೂ ಈ ಲೇಡಿಫೇರಿಯನ್ನು ನಿನ್ನ ಸೇವೆಗೆ ಇಟ್ಟುಕೊಳ್ಳುವೆಯಾ? ಎಂದು ಚುಡಾಯಿಸಿಯೂ ಇದ್ದಳು. ಬ್ಯಾಬೇಜನಿಗೆ ಖಂಡಿತಾ ಆಕೆಯ ಸೇವೆಯ ಅಗತ್ಯವಿತ್ತು. ಆಕೆಯಿಂದ ಬಹಳಷ್ಟು ಪ್ರಭಾವಿತನಾದ ಬ್ಯಾಬೇಜ್ 'ಮೈ ಡಿಯರ್ ಅಂಡ್ ಮಚ್ ಅಡ್ಮೈರ್ಡ್ ಇನಟಪ್ರಿಟೆಸ್' 'ಎನ್ಚಾಂಟ್ರೆಸ್ ಆಫ್ ನಂಬರ್ಸ್' ಎಂದೆಲ್ಲ ಆಕೆಯನ್ನು ಉದ್ದೇಶಿಸಿ ಪತ್ರಗಳನ್ನು ಬರೆದ. ಆಕೆಯ ಕೆಲಸವನ್ನು ಬಹುವಾಗಿ ಮೆಚ್ಚಿದ ಆತ, ಆಕೆಯ ಪ್ರಬಂಧವನ್ನು ತನ್ನ ಕಾಲದ ತನ್ನ ಯಂತ್ರಗಳನ್ನು ಕುರಿತ ಅತ್ಯುತ್ತಮ ವಿವರಣೆ ಎಂದು ಪ್ರಶಂಸಿಸಿದ. 'ಈ ಪ್ರೌಢ ಪ್ರಬಂಧ ಒಂದು ಯಂತ್ರ ವಿಶ್ಲೇಷಣೆಯ ಸಂಪೂರ್ಣ ಕಾರ್ಯವನ್ನು ಮಾಡಬಲ್ಲದು ಎಂಬುದನ್ನು ಸ್ಪಷ್ಟವಾಗಿ ಪ್ರದರ್ಶಿಸಿದೆ' ಎಂದ. ಈಕೆ ಈ ಪುಸ್ತಕದಲ್ಲಿ ಏಳು ಟಿಪ್ಪಣಿಗಳನ್ನು ಸೇರಿಸಿದ್ದಳು. ಅದರಲ್ಲಿ ಮೊದಲನೆಯದು 'ನಿರ್ದೇಶಕ ಎಂಜಿನ್' ಮತ್ತು 'ವ್ಯತ್ಯಸ್ತ ಎಂಜಿನ್' ಕುರಿತಾಗಿದ್ದು 'ನಿರ್ದೇಶಕ ಎಂಜಿನ್' ನ ಹೆಚ್ಚುಗಾರಿಕೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ ನಿರ್ದೇಶಕ ಎಂಜಿನ್‌ಗಳಿಗೆ ತೂತು ಮಾಡಿದ ಕಾರ್ಡುಗಳ ಮೂಲಕ ದತ್ತಾಂಶಗಳನ್ನು ಉಣಿಸುವುದು ಹೇಗೆ ಎಂದು ಕೂಡಾ ಆಡಾ ವಿವರಿಸಿದ್ದಳು. ಈ ಕಾರ್ಡಿನಲ್ಲಿ ತೂತುಗಳ ನಮೂನೆ, ಗಣಿತದ ಸಂಕೇತಗಳಿಗೆ ಸಂಬಂಧಿಸಿದ್ದವು. ಈಕೆ ಕಂಪ್ಯೂಟರುಗಳಿಂದ ಸಂಗೀತವೂ ಸಾಧ್ಯ ಎಂದು ಊಹಿಸಿದ್ದಳು. ಆಡಾಳ ಕೊನೆಯ ಟಿಪ್ಪಣಿ ಕಂಪ್ಯೂಟರುಗಳಿಗೆ ಅತಿ ಮೌಲ್ಯ ಕಟ್ಟಿ ಕಂಪ್ಯೂಟರುಗಳನ್ನು ವಿಜೃಂಭಿಸುವುದರ ಬಗ್ಗೆ ಎಚ್ಚರಿಸಿತ್ತು. ಆಕೆ ಯಂತ್ರದ ಮಹತ್ವದೊಡನೆ ಮಿತಿಯನ್ನೂ ತಿಳಿದವಳಾಗಿದ್ದಳು. ಅನಲಿಟಿಕಲ್ ಎಂಜಿನ್ ತಾನು ಸ್ವಂತವಾಗಿ ಏನನ್ನೂ ಹುಟ್ಟಿಸುವುದಿಲ್ಲ. ನಾವು ತಿಳಿದಿರುವುದನ್ನು ಹೇಗೆ ಮಾಡಬೇಕೆಂದು ಅದಕ್ಕೆ ಆಜ್ಞೆ ನೀಡಿದರೆ ಅದನ್ನು ಹಾಗೆ ಮಾಡಬಲ್ಲದು. ಈ ಯಂತ್ರ ನಮಗೆ ಸಹಾಯಕನಾಗಿ ನಿಲ್ಲುತ್ತದೆ. ಸ್ವತಃ ಊಹಿಸಿ, ಚಿಂತಿಸಿ ಸತ್ಯಗಳನ್ನು ಬಿತ್ತರಿಸುವುದಿಲ್ಲ. ಅವುಗಳು ಚಿಂತಿಸಲು ನಿರ್ದೇಶನಗಳನ್ನು ಬರೆಯಬೇಕು ಎಂದು ವಿವರಿಸಿದ್ದಳು.

ಆಡಾ ಮತ್ತು ಬ್ಯಾಬೇಜನ ನಡುವಿನ ಕೊನೆಯ ಹಂತದ ಪತ್ರಗಳಲ್ಲಿ ಈ ಎಲ್ಲ ಗಣಿತದ ಉತ್ಸಾಹವಿರಲಿಲ್ಲ. ಈ ಪತ್ರಗಳನ್ನು ಬ್ಯಾಬೇಜನ ವರ್ಷ ವರ್ಷಗಳ ಸೋಲು ಮತ್ತು ದುರಂತ, ಆಡಾಳ ಅನಾರೋಗ್ಯವನ್ನು ತುಂಬಿಕೊಂಡಿದ್ದವು. ಇವರಿಬ್ಬರೂ ಸೇರಿ 'ಸಂಭವನೀಯತೆಯ ಗಣಿತದ ಸಿದ್ಧಾಂತಗಳನ್ನು ಪರೀಕ್ಷಿಸಲು ಹೋಗಿ, ಹೆಚ್ಚು ಕಮ್ಮಿ ದಾರಿದ್ರ್ಯದ ಅಂಚಿಗೆ ಬಂದು ನಿಂತರು. ತಮ್ಮ ಸಂಭವನೀಯತೆಯ ಗಣಿತದ ಸಿದ್ಧಾಂತಗಳನ್ನು ಕುದುರೆ ಮೇಲೆ ಬಾಜಿ ಕಟ್ಟಲು ಬಳಸಿದ್ದರು! ಬ್ಯಾಬೇಜ್ ಸದಾ ಆರ್ಥಿಕ ಮುಗ್ಗಟ್ಟಿನಲ್ಲಿ ಸಿಲುಕಿರುತ್ತಿದ್ದ. ಆತನಿಗೆ ಕುದುರೆ ಜೂಜು ತಟ್ಟನೆಯ ಪರಿಹಾರವಾಗಿ ಕಂಡಿತ್ತು. ಇತ ಆಡಾ ಕಾಯಿಲೆ ಬಿದ್ದಾಗ 'ಮಾರ್ಫಿನ್' ಎಂಬ ಹೊಸ ಔಷಧಿಯನ್ನು ಚಿಕಿತ್ಸೆಗೆ ಬಳಸಿದ್ದರು. ಆಡಾ ಅದರ ಚಟಕ್ಕೆ ಸಿಕ್ಕಿಬಿದ್ದು ಮಾರ್ಫಿನಗಾಗಿ ಹೆಚ್ಚಿನ ಹಣ ಸುಲಭವಾಗಿ ಸಂಪಾದಿಸಲು ಕುದುರೆ ಜೂಜಿಗೆ ಬಿದ್ದು. ತನ್ನ ಕುಟುಂಬದ ಒಡವೆಗಳನ್ನೆಲ್ಲಾ ಗಿರವಿ ಇಡುವಲ್ಲಿಗೂ ಆಡಾ ಹೋದಳು. ಆಕೆಯ ಪತಿ ಮತ್ತು ಮೂವರು ಮಕ್ಕಳು ಆಕೆಯ ಈ ಚಟದಿಂದ ಬಹು ನೊಂದರು. ಬ್ಯಾಬೇಜನ ವೈಯಕ್ತಿಕ ಹಣವೆಲ್ಲ, ವ್ಯತ್ಯಸ್ತ ಎಂಜಿನ್ ತಯಾರಿಕೆಯಲ್ಲಿ ಮುಗಿದು ಹೋಗಿತ್ತು. ಇಬ್ಬರ ಹಣದ ತುರ್ತು ಅಗತ್ಯ ಕುದುರೆ ಜೂಜಿಗೆ ನುಗ್ಗಿಸಿತ್ತು. ಆದರೆ ವಾಸ್ತವ ಇವರ ಸುಂದರ ಗಣಿತದ ಸಮೀಕರಣಗಳಿಗೆ ಹೊಂದುವಂತಿರಲಿಲ್ಲ. ಆಡಾ ಈ ಬಾಜಿಯಲ್ಲಿ ಹಣ ಕಳಕೊಂಡು ಸಾಲಗಾರಳಾದಳು. ಆಕೆಯ ಕ್ಯಾನ್ಸರ್ ತಗುಲಿದ ನೋವಿನ ಈ ವರ್ಷಗಳಲ್ಲಿ ತಾನು ಇಷ್ಟು ದೊಡ್ಡ ಮೊತ್ತದ ಹಣವನ್ನು ಕಳೆದುಕೊಂಡ ಬಗ್ಗೆ ಬಹುವಾಗಿ ನೊಂದಳು. ಪಶ್ಚಾತ್ತಾಪ ಪಟ್ಟಳು. ಆಕೆಯ ಪತಿಯೂ ಈ ಬಾಜಿಯಲ್ಲಿ ಮೊದಲು ಸೇರಿದವನು. ನಂತರ ಆಕೆಯ ಸಾಲಗಾರರನ್ನು ನಿಯಂತ್ರಿಸಲು ಆಕೆಯ ಸುತ್ತ ಹುಯಿಲೆದ್ದ ಗಾಳಿಮಾತುಗಳನ್ನು ಹತ್ತಿಕ್ಕಲು ಹೆಣಗಬೇಕಾಯ್ತು. ೧೮೫೨ ಆಡಾ ತನ್ನ ೩೬ನೆ ವಯಸ್ಸಿನಲ್ಲಿ ಗರ್ಭಕೋಶದ ಕ್ಯಾನ್ಸರಿಗೆ ತುತ್ತಾದಳು. ಆಕೆ ಗಣಿತಕ್ಕಿತ್ತ ಕೊಡುಗೆ ಅಗಾಧವಾದುದಲ್ಲದಿದ್ದರೂ ಆಕೆ ತೋರಿದ ಪ್ರತಿಭೆಯಿಂದ ಬಹಳಷ್ಟು ನಿರೀಕ್ಷಿಸಿದಾಗ ತಟ್ಟನೆ ಹಾಯ್ದು ಆಕೆಯ ಸಾವಿನಿಂದಾಗಿ ಆಡಾ ಚರಿತ್ರೆಯಲ್ಲಿ ಮರೆತು ಹೋದಳು. ಆದರೆ ಕಂಪ್ಯೂಟರುಗಳು ಆಧುನಿಕ ಬದುಕಿನ ಅಂಗವಾಗಿ ನಿಂತ ಈ ಕಾಲದಲ್ಲಿ ಮೊಟ್ಟ ಮೊದಲಿಗೆ ಕಂಪ್ಯೂಟರ್ ಭಾಷೆಯ ವ್ಯಾಖ್ಯಾನ ನೀಡಿದವಳಾಗಿ ಆಡಾಳ ಕೊಡುಗೆ ಮಹತ್ವದ್ದಾಗಿದೆ.

ವೈವಾಹಿಕ ಶೋಷಣೆಗೆ ತಾತ್ಕಾಲಿಕ ಉಪಶಮನ : ಮಹಿಳಾ ಪುನರ್ವಸತಿ ಕೇಂದ್ರಗಳು

ಜಗತ್ತಿನಲ್ಲಿ ಹೆಣ್ಣಿನ ಮೇಲಿನ ದೈಹಿಕ ಶೋಷಣೆ ಮತ್ತು ಲೈಂಗಿಕ ಶೋಷಣೆ ಇಂದು ನಿನ್ನೆಯದಲ್ಲ. ಅನಾದಿಕಾಲದಿಂದ ಬಂದದ್ದಾದರೂ ದಿನೇ ದಿನೇ ಅವು ಹೆಚ್ಚುತ್ತಿರುವ ಈ ದಿನಗಳಲ್ಲಿ ಮಹಿಳಾ ಸಾಂತ್ವನ ಕೇಂದ್ರಗಳು ಅವಶ್ಯ. ಝಿಾಂಬಿಯಾದಲ್ಲಿ ಇಂಥ ಕೇಂದ್ರಗಳ ಸಂಖ್ಯೆ ಹೆಚ್ಚುತ್ತಿದೆ.

೧೯೯೬ರಲ್ಲಿ ಝಿಂಬಾಬ್ವೆಯಲ್ಲಿ ವಿನೂತನ ಪುನರ್ವಸತಿ ಕೇಂದ್ರವೊಂದು ಸ್ಥಾಪನೆಗೊಂಡಿತು. ಮಹಿಳೆಯರಿಗಾಗಿ ದುಡಿಯುತ್ತಿರುವ 'ಮಸಾಸಾ ಪ್ರಾಜೆಕ್ಟ್' ಎಂಬ ಸಂಸ್ಥೆಯು ಹರಾರೆಯ ಹೊರವಲಯದಲ್ಲಿ ಶಾಂತ ಪರಿಸರದಲ್ಲಿ ಸುಂದರ ಹೂದೋಟಗಳ ಮಧ್ಯೆ ಈ ಪುನರ್ವಸತಿ ಕೇಂದ್ರವನ್ನು ಸ್ಥಾಪಿಸಿತು. ಇಂದು ಮನೆಯಲ್ಲಿ ಶೋಷಣೆ ಸಂಕಷ್ಟಗಳನ್ನು ಎದುರಿಸುತ್ತಿರುವ ಮಹಿಳೆಯರಿಗೆ ಇದೊಂದು ಆಶ್ರಯ ತಾಣವಾಗಿದೆ.

ಈ ಸಮಾಜದಲ್ಲಿ ಪುರುಷನೇ ಪ್ರಧಾನ. ವ್ಯವಸ್ಥೆಯ ಎಲ್ಲಾ ಅಂಗಗಳು ಇದನ್ನೇ ಸಾರುತ್ತಿರುವಾಗ ಹೆಣ್ಣಾಗಲೀ ಗಂಡಾಗಲೀ ಅದನ್ನು ಒಪ್ಪಿಕೊಂಡೇ ಬಿಟ್ಟಿರುತ್ತಾರೆ. ಪೂರ್ತಿಯಾಗಿ ಒಪ್ಪದ ಹೆಣ್ಣಿಗೆ ಒಂದಲ್ಲ ಒಂದು ರೀತಿಯ ಮಾನಸಿಕ, ದೈಹಿಕ ಹಿಂಸೆ ತಪ್ಪಿದ್ದಲ್ಲ. ಮಕ್ಕಳಾಗಿಲ್ಲ, ಗಂಡುಮಗುವನ್ನು ಹೆತ್ತಿಲ್ಲ, ಗರ್ಭನಿರೋಧಕ ಉಪಾಯಗಳನ್ನು ಅನುಸರಿಸುತ್ತಿದ್ದಾಳೆ. ಮಕ್ಕಳಾಗದಿರಲು ನೀನೂ ಕಾರಣನಿರಬಹುದೆನ್ನುತ್ತಾಳೆ. ತಾನು ಬಯಸಿದಾಗ ಮೈಸುಖ ನೀಡುವುದಿಲ್ಲ. ಬೇರೆ ಗಂಡನೊಂದಿಗೆ ಸಂಬಂಧ ಇಟ್ಟುಕೊಂಡಿರಬಹುದು.......ಒಂದೇ? ಎರಡೇ? ಇನ್ನೂ ಹತ್ತು ಹಲವು ಕಾರಣಗಳು ಕಡೆಯಲ್ಲಿ ಅಡಿಗೆ ಮಾಡಲು ತಡಮಾಡಿದಳೆಂಬ ಕ್ಷುಲ್ಲಕ ಕಾರಣಕ್ಕಾಗಿಯೂ ಹೆಂಡತಿಯನ್ನು ಹೊಡೆದು ಹಿಂಸಿಸುವುದು ತೀರಾಸಹಜ. ಅದು ವೈವಾಹಿತ ಜೀವನದ ಒಂದು ಭಾಗವೆಂದೇ ಹೆಚ್ಚಿನ ಜನ ತಿಳಿದುಬಿಟ್ಟಿದ್ದಾರೆ.

ಪತಿಕೊಟ್ಟ ಹಿಂಸೆಯಿಂದ ಸಾಯುವ ಪತ್ನಿಯರೂ ಅನೇಕ. 'ಮಸಾಸಾ ಪ್ರಾಜೆಕ್ಟ್' ನಡೆಸಿದ ಒಂದು ಅಧ್ಯಯನದ ಪ್ರಕಾರ ಝಿಂಬಾಬ್ವೆಯಲ್ಲಿ ಕೊಲೆಗೀಡಾದ ೨೪೯ ಮಹಿಳೆಯರಲ್ಲಿ ೫೯% ಮಹಿಳೆಯರು ಗಂಡನಿಂದಲೇ ಮೃತ್ಯುವನ್ನು ಪಡೆದಿದ್ದರು. ಅಷ್ಟೇ ಏನು, ಎಷ್ಟೋ ಕೇಸುಗಳಲ್ಲಂತೂ ತಾಳ್ಮೆ ಮೀರಿ ಕೊಲೆಗೈಯುವ ಹಂತಕ್ಕೆ ಗಂಡನನ್ನು ಎಳೆದ ಆ ಹೆಣ್ಣೇ ತಪ್ಪಿತಸ್ಥೆ ಎಂದೇ ಸಾಬೀತಾಗಿದೆ!

ಝಿಂಬಾಬ್ವೆಯ ಪೊಲೀಸ್ ವರದಿಯ ಪ್ರಕಾರ ಪ್ರತಿನಿತ್ಯ ೨೦% ಮಹಿಳೆಯರು ಒಂದಿಲ್ಲೊಂದು ರೀತಿಯಲ್ಲಿ ಗಂಡನಿಂದ ಹಿಂಸೆ ಅನುಭವಿಸುತ್ತಲೆ ಇರುತ್ತಾರೆ. ೧೫% ಮಹಿಳೆಯರು ಗರ್ಭಿಣಿಯಾಗಿದ್ದರೂ ದೈಹಿಕ ಹಿಂಸೆಯಿಂದ ಹೊರತಾಗಿಲ್ಲ. ಇದು ವರದಿಯಲ್ಲಿ ಪ್ರಕಟವಾದ ಸಂಖ್ಯೆಯಷ್ಟೆ. ವರದಿ ಯಾಗಿರದ ಸಂಖ್ಯೆ ಇನ್ನೂ ಅದೆಷ್ಟಿದೆಯೋ. ಕೇವಲ ಝಿಂಬಾಬ್ವೆಯ ಕತೆ ಇದಲ್ಲ. ಜಗತ್ತಿನ ಎಲ್ಲಾ ದೇಶಗಳಲ್ಲಿ ಎಲ್ಲಾ ಸಂಸ್ಕೃತಿಗಳಲ್ಲೂ, ಎಲ್ಲಾ ವರ್ಗಗಳಲ್ಲೂ ಹೆಂಗಸರ ಮೇಲಿನ ದಬ್ಬಾಳಿಕೆ ತೀರಾ ಹೆಚ್ಚಾಗಿ ಆಸ್ಪತ್ರೆ ಸೇರುವ ಮಹಿಳೆಯರಲ್ಲಿ ಗಂಡನಿಂದ ಹಿಂಸೆಗೊಳಗಾದವರೇ ಹೆಚ್ಚು.

ಹಾಗೆಂದು ತಮ್ಮ ದೇಶದಲ್ಲಿ ಹೆಂಗಸರ ಮೇಲೆ ಆಗುತ್ತಿರುವ ಹಿಂಸೆಯನ್ನು ಯಾವ ದೇಶದ ಸರಕಾರವೂ ಒಪ್ಪಿಕೊಳ್ಳುವುದಿಲ್ಲ. ಆಫ್ರಿಕಾದಲ್ಲಿ ವಿಶ್ವಬ್ಯಾಂಕು ಮಾಡಿದ ಸರ್ವೆಯ ಪ್ರಕಾರ ಗಾಯಗೊಳ್ಳುವ ಮಹಿಳೆಯರಲ್ಲಿ ೧/೩ರಷ್ಟು ಮಹಿಳೆಯರಿಗೆ ಗಂಡನೇ ಹೊಡೆದದ್ದು. ಗರ್ಭಿಣಿ ಅಥವಾ ಇನ್ನೂ ಮಕ್ಕಳಾಗಿಲ್ಲದವಳ ಮೇಲೆ ಈ ರೀತಿಯ ಚಿತ್ರಹಿಂಸೆ ನಡೆದರೆ ಮುಂದೆ ಸಂತಾನೋತ್ಪತ್ತಿಯ ಮೇಲೆ ಅದು ಮಾಡುವ ಪರಿಣಾಮ ದೊಡ್ಡದು. ಗರ್ಭಿಣಿಗೆ ಗರ್ಭಪಾತವೇ ಆಗಬಹುದು. ಸತ್ತ ಮಗು ಜನಿಸಬಹುದು ಹುಟ್ಟಿದ ಮಗುವಿನ ತೂಕ ಕಡಿಮೆ ಇರಬಹುದು. ತಾಯಂದಿರ ಸಾವಿಗೂ ಮನೆಯೊಳಗಿನ ಹಿಂಸೆಯೇ ಕಾರಣ ಎಂದು ಝಿಂಬಾಬ್ವೆಯ ಆರೋಗ್ಯ ಮತ್ತು ಮಕ್ಕಳ ಕಲ್ಯಾಣ ಮಂತ್ರಾಲಯವೇ ಒಪ್ಪಿಕೊಂಡಿದೆ. ಲೊಬೊಲೋ-ಕನ್ಯಾಶುಲ್ಕ ಕೊಡುವ ಪದ್ಧತಿ ಇರುವಲ್ಲಿ ಕನ್ಯಾಶುಲ್ಕ ಕೊಟ್ಟು ಮದುವೆಯಾದವರಂತೂ ಹೆಂಡತಿಯ ಸಂತಾನೋತ್ಪತ್ತಿಯ ಜೀವನದ ಮೇಲೆ ಸಂಪೂರ್ಣ ಹತೋಟಿಯನ್ನಿಡಲು ಇಷ್ಟಪಡುತ್ತಾರೆ. ಗರ್ಭನಿರೋಧಕ ಮಾತ್ರೆಗಳನ್ನು ಆ ಹೆಣ್ಣು ಮಕ್ಕಳು ಹಿಟ್ಟಿನ ಡಬ್ಬದೊಳಗೋ ಅಥವಾ ಹಿತ್ತಲಲ್ಲಿ ಮಣ್ಣೊಳಗೋ ಅಡಗಿಸಿಡುತ್ತಾರೆ.

ದೈಹಿಕ ಹಿಂಸೆಯು ಮದುವೆಯ ಒಂದು ಮುಖವಾಗಿದ್ದರೆ, ಲೈಂಗಿಕ ಹಿಂಸೆ ಇನ್ನೊಂದು ಮುಖ. ಗಂಡ ಹೆಂಡತಿಯರ ಲೈಂಗಿಕ ಜೀವನದಲ್ಲಿ ನಿರ್ಧಾರ ಮಾಡುವ ಹಕ್ಕು ಎಂದೂ ಹೆಂಡತಿಗಿಲ್ಲ. ಬಲಾತ್ಕಾರ ಅತ್ಯಾಚಾರಗಳೆಲ್ಲ ನಡೆದರೂ, ಅವೆಲ್ಲ ಮದುವೆಯೆಂಬ ರೇಷ್ಮೆ ಪರದೆಯ ಮುಸುಕಿನೊಳಗಡೆಯೇ. ಅದನ್ನು ಅತ್ಯಾಚಾರ ಎಂದು ಕೋರ್ಟುಗಳು ಕೂಡ ಗುರುತಿಸುವುದಿಲ್ಲ.

ಹೀಗಾಗಿ ೧೯೯೬ರಲ್ಲಿ 'ಮಸಾಸಾ ಪ್ರಾಜೆಕ್ಟ್' ಸಾಂತ್ವನ ಕೇಂದ್ರವನ್ನು ಆರಂಭಿಸಿದಾಗ ಮಹಿಳೆಯರಿಂದಲೇ ವಿರೋಧ ಎದುರಿಸಬೇಕಾಯಿತು. 'ಇವರು ಮದುವೆಗಳನ್ನು ಮುರಿಯಲಿಕ್ಕೆ ಬಂದವರು. ಮನೆಮುರುಕ ಸಂಸ್ಥೆ ಇದು' ಎಂದೆಲ್ಲ. ಕ್ರಮೇಣ ಸಂಸ್ಥೆಯ ಬಗ್ಗೆ ತಿಳುವಳಿಕೆ ಹೆಚ್ಚಾದಂತೆ ಮನೆ ಮುರಿಯುವುದಲ್ಲ. ಮುರಿದ ಮನೆಗಳಿಗೆ ಸಾಂತ್ವನ ನೀಡುವ ಸಂಸ್ಥೆ ಇದೆಂದು ಗೊತ್ತಾಗುತ್ತಲೇ ಇಲ್ಲಿಗೆ ಬರಹೋಗುವವರ ಸಂಖ್ಯೆ ಹೆಚ್ಚುತ್ತಿದೆ.

ಗಂಡನ ಮನೆಯಲ್ಲಿ ಎಲ್ಲಾ ತೆರನ ಹಿಂಸೆಯನ್ನು ಮೌನವಾಗಿ ಎದುರಿಸುತ್ತಿದ್ದ ಮಹಿಳೆಯರಿಗೆ ಹಿಂಸೆ ಅಸಹನೀಯವಾದಾಗ ಹೊರ ಬಂದು ಪುನರ್ವಸತಿ ಕೇಂದ್ರದಲ್ಲಿ ಉಳಿಯುತ್ತಾರೆ. ಇಲ್ಲಿರುವ ಎರಡು ತಿಂಗಳ ಕಾಲ ಅವರಿಗೆ ಸಾಂತ್ವನ ಸಿಗುವುದರೊಂದಿಗೆ ಕೆಲವು ತರಬೇತಿಗಳೂ ದೊರೆಯುತ್ತದೆ. ಮುಂದೇನು ಮಾಡಬೇಕೆಂದು ನಿರ್ಣಯ ತೆಗೆದುಕೊಳ್ಳುವಲ್ಲಿ ಮಸಾಸಾ ಪ್ರಾಜೆಕ್ಟ್ ಸಹಾಯ ಮಾಡುತ್ತದೆ. ಮತ್ತೆ ಗಂಡನನ್ನೋ ಗಂಡನನ್ನು ಬಿಟ್ಟು ಜೀವನವನ್ನೋ ಎದುರಿಸಲು ಶಕ್ತಿ ಪಡೆದು ಅವರು ಹಿಂತಿರುಗುತ್ತಾರೆ. ಇಂಥ ಸಮಸ್ಯೆ ಎದುರಿಸುತ್ತಿರುವ ಮಹಿಳೆ ತಾನೊಬ್ಬಳೇ ಅಲ್ಲ, ಮತ್ತೆ ತಾನು ಆ ಕ್ರೂರ ಪ್ರಪಂಚಕ್ಕೆ ಹಿಂತಿರುಗಲೇ ಬೇಕು ಎಂಬ ಕಟು ಸತ್ಯವನ್ನು ಈ ಸಂಸ್ಥೆ ಸದಾ ಸಾರುತ್ತಿರುತ್ತದೆ.

- ಟಿ. ಡಬ್ಲು. ಎನ್. ಫೀಚರ್
ಕನ್ನಡಕ್ಕೆ ಶಾರದಾ ಗೋಪಾಲ

ಹೀಗೊಂದು ಪುಸ್ತಕ ಬಿಡುಗಡೆ ಸಮಾರಂಭ



ಮನುಷ್ಯನ ಕೆಲವು ಅಪರೂಪದ ನಡವಳಿಕೆಗಳು ಹಾಸ್ಯಕ್ಕೆ ವಸ್ತುವಾಗಬಲ್ಲದೆ? ಈ ಪ್ರಶ್ನೆಗೆ ಉತ್ತರ ಸಿಕ್ಕಿದ್ದು ನೇಮಿಚಂದ್ರ ರವರ 'ಕನಸಿನ ಪಯಣ' ಕೃತಿಯ ಬಿಡುಗಡೆ ಸಮಾರಂಭದಲ್ಲಿ. ಈ ಕೃತಿ ಖಂಡಿತಾ ಹಾಸ್ಯಪ್ರಕಾರದ್ದಲ್ಲ ನೇಮಿರವರ ಬಹುದಿನಗಳ ಆಸೆ ಸಾಕಾರಗೊಂಡಿದ್ದು. ಒಂದು ರೀತಿಯಲ್ಲಿ ಸಾಹಸಮಯವಾಗಿ ಪ್ರವಾಸ ಮಾಡಿಬಂದದ್ದು ಈ ಕೃತಿಯ ಮೂಲ ತಿರುಳು. ಇದರ ಪ್ರತಿ ಪುಟದಲ್ಲೂ ನೇಮಿಚಂದ್ರರವರ ಇತಿಹಾಸದ ಬಗ್ಗೆ ಕಾಳಜಿಗಳು ಕುತೂಹಲಗಳು ಮಹಿಳೆಯರ ಸಾಧನೆಗಳು ಸ್ವಾರಸ್ಯಕರವಾಗಿ ಮೂಡಿಬಂದಿವೆ.

ಇಂಥದೊಂದು ಕೃತಿಯ ಬಿಡುಗಡೆಯ ಮುಖ್ಯ ಅತಿಥಿಯಾಗಿ ಯಾವ ಗಣ್ಯರನ್ನು ಆಹ್ವಾನಿಸ ಬೇಕು ಎನ್ನುವ ಪ್ರಶ್ನೆ. ಈ ಕಾರ್ಯಕ್ರಮ ಹಮ್ಮಿ ಕೊಂಡ ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ ಮತ್ತು ಮಹಿಳಾ ಪ್ರಕಾಶನದವರಿಗೆ ಎದುರಾದಾಗ ಪ್ರವಾಸವನ್ನೇ ಪ್ರವೃತ್ತಿಯಾಗಿರಿಸಿಕೊಂಡ, ಅಮೆರಿಕೆಯಲ್ಲಿ ನಾನು, ವಂಗದರ್ಶನ, ಕಾಲರಂಗ, ಇತ್ಯಾದಿ ಉತ್ತಮ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಇತ್ತ ಶ್ರೀ ಕೃಷ್ಣಾನಂದ ಕಾಮತ್‌ರನ್ನು ಆಹ್ವಾನಿಸುವುದೆಂದು ತೀರ್ಮಾನವಾಯಿತು. ಆದರೆ ದೊಡ್ಡ ತೊಂದರೆ ಇದ್ದದ್ದು ಈ ಮಹಾನ್ ಲೇಖಕರು ಸಾರ್ವಜನಿಕವಾಗಿ ತಮ್ಮನ್ನು ಬಹಿರಂಗಗೊಳಿಸಿಕೊಳ್ಳಲು ಇಚ್ಛಿಸದೇ ಇದ್ದುದು.

ಶ್ರೀ ಕಾಮತ್ ಮತ್ತು ಶ್ರೀಮತಿ ಜ್ಯೋತ್ಸ್ನಾ ಕಾಮತ್ ರವರು ನೇಮಿಚಂದ್ರ ರವರ ಇತರ ಕೃತಿಗಳನ್ನು ಓದಿ ಮೆಚ್ಚಿಕೊಂಡು, ಇವರನ್ನು ತಮ್ಮ 'ಸಾಹಿತ್ಯಕ ಮಗಳು' ಎಂದು ಆದರಿಸುವುದರಿಂದ ಶ್ರೀ ಕಾಮತ್‌ರವರೂ ಈ ಸಮಾರಂಭಕ್ಕೆ ಬರಲು ಸುಲಭವಾಯಿತು. ಶ್ರೀ ಕಾಮತ್‌ರು ಕೃತಿ ಬಿಡುಗಡೆ ಮಾಡಿ ನೇಮಿಚಂದ್ರರವರಲ್ಲಿರುವ ಇತಿಹಾಸದ ಕಾಳಜಿಗಳನ್ನು ತುಂಬ ಮೆಚ್ಚಿಕೊಂಡರು. ಅವರು ದಾಖಲಿಸುವ ಮಹಿಳಾ ವಿಜ್ಞಾನಿಗಳ ಬಗ್ಗೆ ತಿಳಿಸುತ್ತಾ "ಕನ್ನಡದಲ್ಲಿ ಬಂದಿರುವ ಅಪರೂಪದ ಪುಸ್ತಕ ಇದು" ಎಂದರು. "ಪ್ರವಾಸ ಸಾಹಿತ್ಯವೆಂದರೆ ನಾನು ಅಲ್ಲಿಹೋಗಿದ್ದೆ. ಅಲ್ಲಿ ಹೀಗಿದೆ ಇಂಥ ಇಂಥ ಪ್ರೇಕ್ಷಣೀಯ ಸ್ಥಳಗಳಿವೆ ಎಂದಷ್ಟೇ ದಾಖಲಿಸುವುದು ಪ್ರಾರಂಭದ ದೆಸೆಯಲ್ಲಿತ್ತು. ಈಗ ಇದರ ವಿಸ್ತಾರ ಹೆಚ್ಚಾಗಿದೆ. ಅದಕ್ಕೆ ಉತ್ತಮ ನಿದರ್ಶನ ನೇಮಿಚಂದ್ರರವರ ಈ ಪುಸ್ತಕ' ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹಿರಿಯ ಲೇಖಕಿ ಶ್ರೀಮತಿ ಎಚ್. ಎಸ್. ಪಾರ್ವತಿಯವರು ಮಾತನಾಡಿ, "ಸಾಮಾನ್ಯವಾಗಿ ಸೋತ ಮಹಿಳೆಯರ ಬಗ್ಗೆ ಹೇಳುವುದಕ್ಕಿಂತ ಪ್ರವಾಹದವಿರುದ್ಧ ಈಜಿ ಗೆದ್ದ ಮಹಿಳೆಯರನ್ನೇ ನೇಮಿಚಂದ್ರರವರು ದಾಖಲಿಸುತ್ತಾರೆ. ನೇಮಿರವರ ಕತೆಗಳಲ್ಲಿ ಈ ರೀತಿಯ ಪಾತ್ರಗಳು ಹೇರಳವಾಗಿ ಸಿಗುತ್ತದೆ. ಈ ಕಳಕಳಿಯನ್ನು ನೇಮಿಚಂದ್ರ ತಮ್ಮ ಪ್ರವಾಸ ಸಾಹಿತ್ಯದಲ್ಲೂ ತೋರಿದ್ದಾರೆ. ಇತಿಹಾಸದಲ್ಲಿ ಎಷ್ಟೊಂದು ಕಷ್ಟಗಳ ನಡುವೆಯೂ ತಮ್ಮ ಗುರಿಮುಟ್ಟಿದ ಮಹಿಳೆಯರನ್ನು ದಾಖಲಿಸಿರುವುದು. ಇದು ಕೇವಲ ಪ್ರವಾಸ ಕಥನವಷ್ಟೇ ಅಲ್ಲ, ಇದೊಂದು ಮಹಿಳಾ ಅಧ್ಯಯನದ ಮಹತ್ವದ ಪುಸ್ತಕ ಆಗಿದೆ" ಎಂದರು.

ಪ್ರಕಾಶಕಿ ಶ್ರೀಮತಿ ಹನುಮಾಕ್ಷಿಗೋಗಿಯವರು ಮಾತಾನಾಡಿ "ನೇಮಿಚಂದ್ರ ರವರ ಪುಸ್ತಕ ಪ್ರಕಟಣೆ ತಮ್ಮ ಪ್ರಕಾಶನದಿಂದ ಹೊರಬರುತ್ತಿರುವುದು ತಮ್ಮ ಸಂಸ್ಥೆಗೆ ಮತ್ತೊಂದು ಚಿನ್ನದ ಗರಿ ಸಿಕ್ಕಿಸಿದಂತಾಗಿದೆ" ಎಂದರು.

- ವರದಿ : ಶಾಂತಾನಾಗರಾಜ್

ಪುಸ್ತಕ ಪರಿಚಯ

ಜನಪದ ಸಾಹಿತ್ಯದ ಮಹಿಳಾ ಜಗತ್ತು : ಜನಪದ ಸಾಹಿತ್ಯ ಮತ್ತು ಮಹಿಳೆಯನ್ನು ಕುರಿತಂತಹ ಲೇಖನಗಳ ಸಂಗ್ರಹ. ಸಂಪಾದಕಿ: ಡಾ॥ ಆರ್. ಸುನಂದಮ್ಮ. ಪ್ರಕಾಶಕರು : ಸಮತಾ ಅಧ್ಯಯನ ಕೇಂದ್ರ, ಮೈಸೂರು.
ರೂ. ಬೆಲೆ - ೬೦/- ೧೯೯೭

ಈ ಸಂಕಲನದಲ್ಲಿ ಹತ್ತು ಜನಪದ ವಿದ್ವಾಂಸರಿಂದ ರಚಿತವಾದ ಲೇಖನಗಳಿವೆ. ಜಾನಪದ ಶಾಬ್ದಿಕ ಹಾಗೂ ಅಶಾಬ್ದಿಕ ರೂಪಗಳನ್ನು ಬಳಸಿಕೊಂಡು ಇಲ್ಲಿನ ಲೇಖಕರು ಸ್ತ್ರೀ ಸಂಬಂಧಿ ವಿಷಯಗಳ ವಿಶ್ಲೇಷಣೆಯನ್ನು ಮಾಡಿದ್ದಾರೆ. ಒಂದೇ ವಸ್ತುವಿನ ಹಲವು ಪಾಠಗಳನ್ನೂ ಇಲ್ಲಿನ ಕೆಲವು ಅಧ್ಯಯನಗಳಲ್ಲಿ ಗಮನಿಸಲಾಗಿದೆ. ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ಎಂಟು ಲೇಖನಗಳಿವೆ. ಆಚರಣೆಗೆ ಸಂಬಂಧಿಸಿದ ಎರಡು ಲೇಖನಗಳಿವೆ.

ತುಳು ಜನಪದ ಸಾಹಿತ್ಯದ ವಿಶೇಷ ಪ್ರಕಾರಗಳಲ್ಲಿ ಒಂದಾದ ಪಾಡ್ದನಗಳು ತುಳುವ ಸಂಸ್ಕೃತಿಯ ಅಧ್ಯಯನ ಹಾಗೂ ಮರುರಚನೆಯಲ್ಲಿ ಹೇಗೆ ಪ್ರಮುಖ ಮೌಖಿಕ ಆಕರಗಳಾಗಿ ನಿಲ್ಲುತ್ತವೆ. ಎಂಬುದನ್ನು ಶ್ರೀಮತಿ ಗಾಯತ್ರಿ ನಾವಡರವರು ತಮ್ಮ ಲೇಖನದಲ್ಲಿ ದೀರ್ಘವಾಗಿ ಚರ್ಚಿಸುತ್ತಾರೆ. ಇದುವರೆಗೂ ನಡೆದಿರುವ ಪಾಡ್ದನಗಳ ಸಂಗ್ರಹ, ಅಧ್ಯಯನಗಳು ಪುರುಷದೃಷ್ಟಿಕೋನದಿಂದ ನಡೆದವೆಂಬುದನ್ನು ಗುರುತಿಸುವ ಗಾಯತ್ರಿಯವರು ಮಹಿಳಾ ಪರಂಪರೆಯ ಪಾಡ್ದನಗಳನ್ನು ಆಯ್ದುಕೊಂಡು ಸ್ತ್ರೀವಾದಿ ನೆಲೆಯಿಂದ ಅಧ್ಯಯನ ಮಾಡಬೇಕಾದ ಅಗತ್ಯದ ಆಶಯವನ್ನು ಈ ಲೇಖನದಲ್ಲಿ ಪ್ರಕಟಿಸುತ್ತಾರೆ. ಪುರುಷ ವ್ಯವಸ್ಥೆಯನ್ನು ಪ್ರಶ್ನಿಸುವ, ಪ್ರತಿಭಟಿಸುವ ಹೋರಾಡುವ ಮಾನಿಗ, ಸಿರಿ ಕಲ್ಲುರ್ಟಿ, ನಾಗಸಿರಿ, ಬಾಲೆಬಾನಿಯಂತಹ ಸ್ತ್ರೀಮಾದರಿಗಳ ಮಹತ್ವವನ್ನು ಈ ಲೇಖನದಲ್ಲಿ ವಿವರಿಸುತ್ತಾರೆ.

ಡಾ॥ ಸಿ. ವೈ. ಕವಿತಾರವರು ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಸ್ವಪ್ರತೀಕಗಳು ಲೇಖನದಲ್ಲಿ ಜನಪದ ಸಾಹಿತ್ಯದ ಪ್ರಮುಖ ಅಂಗವಾದ ತ್ರಿಪದಿಗಳಲ್ಲಿ ಕಂಡು ಬರುವ ಹೆಣ್ಣಿನ ಸ್ವಪ್ರತೀಕಗಳ ಹಲವಾರು ನಿದರ್ಶನಗಳನ್ನು ಸವಿವರವಾಗಿ ಮಂಡಿಸುತ್ತಾರೆ. ಜನಪದ ರಾಮಾಯಣ ಮತ್ತು ಮಹಾಭಾರತಗಳಲ್ಲಿನ ಸ್ತ್ರೀಪಾತ್ರಗಳನ್ನು ವಿಶ್ಲೇಷಿಸಿ, ಅವು ಸ್ತ್ರೀಕೇಂದ್ರಿತ ಕಾವ್ಯಗಳಾಗಿರುವುದನ್ನು ಡಾ॥ ಆರ್. ಸುನಂದಮ್ಮನವರು ತಮ್ಮ ಲೇಖನದಲ್ಲಿ ಬರೆಯುತ್ತಾರೆ.

ಜನಪದ ಕಥನ ಕಾವ್ಯಗಳಾದ ಕೆರೆಗೆ ಹಾರ, ಸತಿ, ಉತ್ತರದೇವಿ ಮತ್ತು ಗುಣಸಾಗರಿ ಕಥೆಗಳಲ್ಲಿ, ಅವುಗಳ ವಿವಿಧ ಪಠ್ಯಗಳ ಅಧ್ಯಯನವನ್ನು ವಿಶದವಾಗಿ ನಡೆಸಿರುವ ಡಾ॥ ಚಂದ್ರಮತಿ ಸೋಂದಾರವರು ಈ ಕಾವ್ಯಗಳಲ್ಲಿ ಮಹಿಳೆಯ ಅಸ್ತಿತ್ವದ ವಿವಿಧ ನೆಲೆಗಳನ್ನು ಗುರುತಿಸುತ್ತಾರೆ. ಸಮುದಾಯದ ಕಲ್ಯಾಣ, ಪಾತಿವ್ರತ್ಯ, ಸತಿ ಮುಂತಾದ ಸ್ವೀಕೃತ ಮೌಲ್ಯಗಳ ಹಿನ್ನೆಲೆಯುಳ್ಳ - ಕೆರೆಗೆ-ಕೋಟೆಗೆ ಬಲಿಯಾಗುವ ಕೊಂಡಹೋಗುವ ಗಂಡನನ್ನು ಬದುಕಿಸುವ ಕಥನ ಕಾವ್ಯಗಳನ್ನು ಹಾಗೂ ಅಸಹಾಯಕತೆಯಿಂದಾಗಿ ನೋಯುವ, ಆತ್ಮಾಹುತಿಯಾಗುವ ಕಾವ್ಯಗಳ ಅಂಶಗಳನ್ನು ವಿವೇಚಿಸಿದ್ದಾರೆ. ಈ ನಾಲ್ಕೂ ಕಥಾನಕಗಳ ವಿಶ್ಲೇಷಣೆಯ ನಂತರ ಚಂದ್ರಮತಿಯವರು ಕೆಲವೊಂದು ತೀರ್ಮಾನಗಳಿಗೆ ಬರುತ್ತಾರೆ: "ಯಾವ ಕೌಟುಂಬಿಕ ವ್ಯವಸ್ಥೆಯು ಮಹಿಳೆಯ ಭದ್ರನೆಲೆ ಎಂದು ಭಾವಿಸಲಾಗಿದೆಯೊ ಅದು ಅಭದ್ರತೆಯ ತಾಣ ಎನ್ನುವುದನ್ನು ಈ ಎಲ್ಲ ಕಥಾನಕಗಳು ತೆರೆದಿಡುತ್ತದೆ. ಸಮಾಜವು ನಿರ್ಧರಿಸಿದ ಮೌಲ್ಯ ವ್ಯವಸ್ಥೆಯನ್ನು ಒಪ್ಪಿ ಅದೇ ಚೌಕಟ್ಟಿನಲ್ಲಿಯೇ ಬದುಕುತ್ತಿದ್ದರೂ ಇಲ್ಲಿನ ಹೆಂಸಗರು ಎಂಥ ಅತಂತ್ರ ಬದುಕು ಎನ್ನುವುದು ಗಮನಿಸಬೇಕಾದ ಅಂಶ. ತನ್ನ ಕುಟುಂಬಕ್ಕಾಗಿ ಜೀವ ತೇಯುವ ಹೆಂಗಸು ಯಾವ ಹಂತದಲ್ಲಿಯೂ ತನ್ನಿಚ್ಛೆಯಂತೆ ನಡೆದುಕೊಳ್ಳುವಂತಿಲ್ಲ. ಅವಳ ಎಲ್ಲ ಅನಿಸಿಕೆ, ಆಶಯಗಳನ್ನು ಹತ್ತಿಕ್ಕಿದ ಪರಂಪರೆಯು ಅವಳನ್ನು ಹೀಗೆ ಬದುಕಬೇಕೆಂಬುದು ನಿರ್ಬಂಧಿಸಿತು. ಈ ರೀತಿ ನಿರ್ಬಂಧಿಸುವುದರ ಮೂಲಕ ತನಗೆ ಬೇಕಾದ 'ಮಾದರಿ'ಗಳನ್ನು ರೂಪಿಸುತ್ತ ಬಂತು. ಅಧಿಕಾರ ಸ್ಥಾನದಲ್ಲಿರುವವನ್ನು ಪ್ರಶ್ನಿಸಲಾಗದ 'ಕೆರೆಗೆಹಾರ'ವಾದ ಹೆಂಗಸರ 'ಮಾದರಿ'ಯಿರಬಹುದು ಅಂಥ 'ಮಾದರಿ' ಗಳನ್ನು ನಿರ್ಮಿಸಿ ಹೆಂಗಸು ಇರಬೇಕಾದ ರೀತಿ ಹೀಗೆಂದು ಚರಿತ್ರೆಯುದ್ದಕ್ಕೂ ನಿರ್ದೇಶಿಸುತ್ತಲೇ ಬರಲಾಗಿದೆ.

'ಬಹುಪತ್ನಿತ್ವದಡಿಯಲ್ಲಿ ಬೆಂದ ದೇವಿಯರು' ಎಂಬ ಮಂಜುಳಾ ಹುಲ್ಲಹಳ್ಳಿಯವರ ಲೇಖನ, ಗೀತೆಗಳಲ್ಲಿ ಜನಪದ ಮಹಿಳೆಯ ಹಾಡು-ಪಾಡು ಎಂಬ ಬಿ. ಸಿ. ಮಂಜುಳಾರವರ ಲೇಖನ ಜನಪದ ಗೀತೆಗಳಲ್ಲಿ ವ್ಯಕ್ತವಾಗುವ ಹೆಣ್ಣಿನ ಸ್ಥಿತಿಗತಿಯನ್ನು ಕುರಿತದ್ದು. ಲಿಂಗವ್ಯವಸ್ಥೆಯ ವಾಹಕಗಳಾಗಿ ಕೆಲಸ ಮಾಡುವ ಗಾದೆಗಳನ್ನು ಕುರಿತ ಡಾ॥ ವಿಜಯಾದಬ್ಬೆಯವರ ಲೇಖನ ಸಾಹಿತ್ಯಕವಾಗಿಯೂ ಸಾಂಸ್ಕೃತಿಕವಾಗಿಯೂ ಮಹತ್ವದ್ದು. "ಗಾದೆಗಳ ರಚನೆ ಮತ್ತು (ಬಳಕೆಯ ನೆಲೆಗಳೇ ಹಲವಿರುವುದರಿಂದ ಲಿಂಗವ್ಯವಸ್ಥೆಯನ್ನು ಕುರಿತ ಒಂದು) ದೃಷ್ಟಿಕೋನ ಇಲ್ಲಿಲ್ಲ. ಸ್ತ್ರೀಯರ-ಅಧೀನ-ಸಮಾನ ನೆಲೆಗಳು ಇಲ್ಲಿ ದನಿ ಪಡೆದಿವೆ. ಒಮ್ಮೊಮ್ಮೆ

ಒಂದರೊಳಗೊಂದು ಸೇರಿ ಹೋಗಿವೆ. ಕಾವ್ಯಾದಿಗಳಂತೆ ಸಂಗೋಪನೆ ಮತ್ತು ವಕ್ತೃತ್ವಗಳು ಯಾರೋ ಕೆಲವರ ಕೈಯಲ್ಲಿ ಉಳಿಯದೆ ಜನ ಸಮೂಹದ ನಡುವೆಯೇ ಗಾದೆಗಳು ಉಳಿದು, ಬಾಳಬೇಕಾಗಿರುವುದರಿಂದ ಹಿನ್ನೆಲೆಯಲ್ಲಿದ್ದ ಒಳಾಂಗಣದಲ್ಲಿದ್ದ ಕೆಲವು ಸ್ತ್ರೀಯರ ಪರಮಾಧಿಕಾರದ ನೆಲೆಗಳು ಸೆನ್ಸಾರ್‌ಗೂ ಒಳಗಾಗಬಹುದು. ಈ ಕಾರಣದಿಂದಾಗಿಯೂ ಸಾರ್ವಜನಿಕ ವಲಯಗಳನ್ನು ಶಕ್ತಿ ಕೇಂದ್ರಗಳನ್ನು ಆವರಿಸಿದ್ದ ಪುರುಷ ಕೇಂದ್ರಿತ ದೃಷ್ಟಿಯ ಹಿಡಿತ ಗಾದೆಗಳ ಮೇಲೆ ಹೆಚ್ಚುವ ಸಾಧ್ಯತೆಯೂ ಇದೆ. ಗಾದೆಗಳ ವಿಸ್ತೃತ ಅಧ್ಯಯನಗಳು ಗಾದೆಗಳ ಸಂರಚನೆ - ಸಂದರ್ಭಗಳಿಗೂ ಸ್ತ್ರೀ ಪುರುಷರ ಬಲಾಬಲಗಳಿಗೂ ಇರುವ ಸಂದರ್ಭಗಳನ್ನು ಸ್ಪಷ್ಟಪಡಿಸಬಹುದು ಎನ್ನುತ್ತಾರೆ.

ಜನಪದ ಕತೆಗಳ ರಚನೆ, ಆಶಯ, ಸ್ವರೂಪವನ್ನು ಕುರಿತ ಡಾ|| ಪ್ರೀತಿ ಶುಭಚಂದ್ರರವರ ಲೇಖನ "ಯಾರವ್ವ ಬೂಟು ? ಯಾರವ್ವ ಕೋಟು ?ಈಗಾಗಲೇ ಆಗಿ ಹೋದ 'ನಡೆ'ಯನ್ನು 'ನುಡಿ'ಯ ಮೂಲಕ ಪುನಾರಚಿಸುವ ಆಚರಣಾತ್ಮಕ ಕ್ರಿಯೆ ಕಥನಕಾವ್ಯ ಹಿನ್ನೆಲೆಗಿದೆಯನ್ನುವ ಪ್ರೀತಿಯವರು ಕತೆಗಳ ರಚನೆಯಲ್ಲಿ ಮೂರು ಮುಖ್ಯ ಅಂಶಗಳನ್ನು ಗುರುತಿಸುತ್ತಾರೆ. ೧) ತನ್ನ ಸುತ್ತಲಿನ ಜಗತ್ತಿನಲ್ಲಿ ಏನು ನಡೆಯುತ್ತಿದೆಯೋ ಅದು ೨) ಈ ಜಗತ್ತು ಹೇಗಿರಬೇಕೆಂದು ಮನಬಯಸುತ್ತದೋ ಅದು ಮತ್ತು ೩) ಹೇಗಿರದಿದ್ದರೆ ಈ ಜಗತ್ತು ಚೆನ್ನಿತ್ತು ಎಂದು ಅನ್ನಿಸುತ್ತದೆಯೋ ಅದು. ಗಂಡು ಹೆಣ್ಣುಗಳಿಂದ ಕೂಡಿದ ಸಮಾಜ ವ್ಯವಸ್ಥೆಯಲ್ಲಿನ ಮೌಲ್ಯ ಸ್ವರೂಪವನ್ನು ಜನಪದಕತೆಗಳಲ್ಲಿ ಅಧಿಕೃತವಾಗಿ ಕಾಣಬಹುದು ಎಂಬ ಅಂಶವನ್ನು ಈ ಲೇಖನದಲ್ಲಿ ಸ್ಪಷ್ಟಪಡಿಸಲಾಗಿದೆ.

ಜನಪದ ಆಚರಣೆಯನ್ನು ಕುರಿತ ಎರಡು ಲೇಖನಗಳು ಈ ಸಂಕಲನದಲ್ಲಿವೆ. ಸಿ. ಹೇಮಲತಾರವರ 'ಒಸಗೆ'ಯನ್ನು ಕುರಿತ ಲೇಖನ. ಮತ್ತೊಂದು 'ಸಿರಿ' ಆಚರಣೆಯನ್ನು ಕುರಿತ ಕೃಷ್ಣಮೂರ್ತಿ ಹನೂರರವರ ಮತ್ತೊಂದು ಲೇಖನ ಮಹಿಳೆಯ ಜೀವೋತ್ಪಾದಕ ಸಾಮರ್ಥ್ಯಕ್ಕೆ ಮಾನ್ಯತೆ, ಹೆಣ್ಣಿನ ಜೈವಿಕ ಸ್ಥಿತ್ಯಂತರವನ್ನು ಕುರಿತ ಬೆರಗು ಮತ್ತು ಅತಿಭೌತಿಕ ಶಕ್ತಿಗಳು ಈ ವಿದ್ಯಮಾನಗಳನ್ನು ಪ್ರಭಾವಿಸಬಹುದೆಂಬ ಬೆರಗು ಎಲ್ಲವನ್ನು ಹೇಮಲತಾರವರು 'ಒಸಗೆ' ಆಚರಣೆಯ ಹಿಂದೆ ಗುರುತಿಸುತ್ತಾರೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ವಿವಿಧ ಸ್ವರೂಪದಲ್ಲಿರುವ ಈ ನಿಟ್ಟಿನಲ್ಲಿ ಇನ್ನೂ ವ್ಯಾಪಕವಾದ ಅಧ್ಯಯನ, ಸಂಶೋಧನೆ ನಡೆಯಬೇಕಿದೆಯೆನ್ನುತ್ತಾರೆ.

ಹೀಗೆ ಜನಪದ ಜಗತ್ತಿನ ಹಲವಾರು ಮುಖಗಳನ್ನು ಪರಿಚಯಿಸುವ ಈ ಸಂಕಲನ ಸ್ತ್ರೀವಾದಿ ಅಧ್ಯಯಕ್ಕೊಂದು ಮಹತ್ವದ ಕೊಡುಗೆಯಾಗಿದೆ. ಶಿಷ್ಟ ಸಾಹಿತ್ಯ ಜಗತ್ತಿನ ಮಹಿಳಾ ಲೋಕಕ್ಕಿಂತ ಭಿನ್ನವಾದ ಜನಪದ ಮಹಿಳಾ ಜಗತ್ತನ್ನು ವಿವಿಧ ವಿದ್ವಾಂಸರ ಅಧ್ಯಯನದ ಮೂಲಕ ಪ್ರಕಟಿಸುವ, ಸಂಕಲಿಸಿರುವ ಸಂಪಾದಕಿ ಡಾ|| ಆರ್. ಸುನಂದಮ್ಮರವರ ಪ್ರಯತ್ನ ಸ್ತುತ್ಯಾರ್ಹವಾದದ್ದು.

ಕಳೆದು ಹೋಗುತ್ತೇವೆ

(ಕವನ ಸಂಕಲನ) ಡಿ. ಬಿ. ರಜಿಯೂ. ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಗೋಕುಲಂ, ಮೈಸೂರು. ಪುಟ - ೬೦, ಬೆಲೆ ರೂ. ೩೦/-, ೧೯೯೬

ತಮ್ಮ ಮೊದಲ ಕವನ ಸಂಕಲನ 'ಛಾಯೆ' ಯಿಂದ ಓದುಗರ, ವಿಮರ್ಶಕರ ಗಮನ ಸೆಳೆದ, ಬಹುಮಾನಗಳನ್ನು ಪಡೆದ ಡಿ. ಬಿ. ರಜಿಯೂ ರವರ ಎರಡನೆಯ ಕವನ ಸಂಕಲನವಿದು. ಇದಕ್ಕೆ ಹಾ. ಮಾ. ನಾಯಕರ ಮುನ್ನುಡಿ ಹಾಗೂ ಜಿ. ಎಸ್. ಶಿವರುದ್ರಪ್ಪನವರ ಬೆನ್ನುಡಿಯಿದೆ. ಇದರಲ್ಲಿ ಒಟ್ಟು ನಲವತ್ತು ಕವನಗಳಿವೆ.

"ಶೂನ್ಯದಾಗಸದಡಿ ಒಬ್ಬಳೇ ಕುಳಿತು ಕತ್ತಲೆಯ ಕರಾಳತೆ ಅಳೆಯಲು ಯತ್ನಿಸುತ್ತಿದ್ದೆ !" ಎನ್ನುವ ಕೃತಿ ಬಾಹ್ಯ ಪರಿಸರದ ವಾತಾವರಣದ ವಿವಿಧ ನೆಲೆಗಳನ್ನು ಮನುಷ್ಯ ಮನಸ್ಸಿನೊಳಗೂ ಶೋಧಿಸುವ ಕೆಲಸ ಮಾಡುತ್ತದೆ. ಪುರುಷ ಪ್ರಧಾನ ಸಮಾಜದ ವಿವಿಧ ಒತ್ತಡಗಳಲ್ಲಿ ಹೆಣ್ಣುಗಳು ತಾವು ಕಳೆದು ಹೋಗುತ್ತಿದ್ದೇವೆ ಎಂದು, ಕೊಳ್ಳುವುದು ಇಲ್ಲಿ ನಿರಾಶೆಯಾಗಿ ಮೂಡಿಬರದೆ ವಾಸ್ತವ ಸತ್ಯವನ್ನು ಅರಗಿಸಿಕೊಳ್ಳುವ ಸಮರ್ಥನೆಯ ಧ್ವನಿಯಾಗಿ ಮೂಡಿಬರುತ್ತದೆ.

ಇಲ್ಲಿರುವ ಕವಿತೆಗಳು ಮತ್ತು ಚುಟುಕುಗಳು ಆಧುನಿಕ ಮಹಿಳೆಯೊಬ್ಬಳ ಸಂವೇದನೆಗಳನ್ನು ಸಮರ್ಥವಾಗಿ ಚಿತ್ರಿಸುತ್ತವೆ. ಸರಳವಾದ ಭಾಷೆ ಮತ್ತು ಸಹಜವಾದ ರಚನೆಯಿಂದಾಗಿ ರಜಿಯಾರವರ ಇಲ್ಲಿನ ಕವನಗಳು ಸಮರ್ಥವಾಗಿ ಸಂವಹನಗೊಳ್ಳುತ್ತವೆ.

ಈ ಸಂಕಲನದ ಯಶಸ್ವೀ ಕವನಗಳಲ್ಲೊಂದಾದ 'ಕಣಜ'ದಲ್ಲಿ ರಜಿಯಾರವರು ನೆನಪುಗಳ ಬಗ್ಗೆ ಬರೆಯುತ್ತಾರೆ.

ಮುಳ್ಳುಬೇಲಿಯಲ್ಲಿ ಮೈ ತೂರಿಸಿದಂತೆ
ನೋಯಿಸುತ್ತವೆ
ಕೆಲನೆನಪುಗಳು :
ಮಲ್ಲಿಗೆ ವನದಲ್ಲಿ
ಅಡ್ಡಾಡುವಾಗ ತೂರಿ ಬರುವ
ಘಮ ಘಮ ವಾಸನೆಯಂತೆ
ಮನದಲ್ಲಿ ಹುಲುಸಾಗಿ
ನವಿರೇಳಿಸುತ್ತವೆ.

ಪ್ರೀತಿಯ ಅಚಲಾ

'ನಷ್ಟ ಚರಿತೆಯ ಹೊರೆಯ ಬೆನ್ನಲ್ಲಿ ಹೊತ್ತು ಎನ್ನುವ ಸಾಲೊಂದನ್ನು ನಮ್ಮ ಜಾಗೃತಿ ಗೀತೆಯಲ್ಲಿ ಹಾಡುತ್ತೇವೆ. ಮಹಿಳೆಯ ನಷ್ಟ ಚರಿತೆಯ ವ್ಯಾಪ್ತಿಗೆ ನಿಜಕ್ಕೂ ಎಷ್ಟು ಆಳ ಅಗಲಗಳಿವೆ ಎನ್ನುವುದನ್ನು ಬಹುಶಃ ಯಾರಿಂದಲೂ ಊಹಿಸುವುದೂ ಸಾಧ್ಯವಿಲ್ಲವೆನೋ. ನಾನೊಂದು ಹಳೆಯ ಪುಸ್ತಕ ಓದುತ್ತಿದ್ದೆ. ಅದರಲ್ಲಿದ್ದ ಕೆಲವು ವಿಚಾರಗಳು, ಇತಿಹಾಸದ ಗರ್ಭದಲ್ಲಿ ಕಳೆದುಹೋದ ನಷ್ಟ ಚರಿತೆಯ ಬಗ್ಗೆ ಚಿಂತಿಸುವಂತೆ ಮಾಡಿತು. ೧೯೫೫ರಲ್ಲಿ ಶ್ರೀ ಮೈಸೂರು ವಾಸುದೇವಾಚಾರ್ಯರೆಂಬ ಸಂಗೀತದ ಮಹಾನ್ ವಿದ್ವಾಂಸರು ತಮ್ಮ ತೊಂಬತ್ತನೇ ವಯಸ್ಸಿನಲ್ಲಿ ಬರೆದ 'ನಾ ಕಂಡ ಕಲಾವಿದರು' ಎನ್ನುವ ಕೃತಿ ಅದು. ಅವರು ತಮ್ಮ ಬಾಲ್ಯದ, ಯೌವನದ, ಮತ್ತು ನಂತರದಲ್ಲೂ ತಮ್ಮ ಮೇಲೆ ಪ್ರಭಾವ ಬೀರಿದ ಮಹಾ ಸಾಧಕ ಸಂಗೀತಜ್ಞರ ಬಗ್ಗೆ ಬರೆದಿದ್ದಾರೆ. ಈ ಕೃತಿಯಲ್ಲಿ ಪ್ರಾಸಂಗಿಕವಾಗಿ ಕೆಲವೇ ಮಹಿಳೆಯರು ಬರುತ್ತಾರೆ. ಅವರ ಬಗ್ಗೆ ಮತ್ತೊಂದು ಆಯಾಮದಿಂದ ಯೋಚಿಸಿದರೆ ತುಂಬ ಅಚ್ಚರಿಯೇ ಆಗುತ್ತದೆ. ಅವರಿಗಿದ್ದ ಅತಿ ಸೀಮಿತ ವಲಯದಲ್ಲೂ ಈ ಮಹಿಳೆಯರು ಅದೆಷ್ಟು ಬುದ್ಧಿವಂತರಾಗಿದ್ದರು ಎನ್ನುವ ಸತ್ಯ ಗೋಚರವಾಗುತ್ತದೆ.

ಮೈಸೂರು ವೀಣೆ ಶೇಷಣ್ಣನವರು ಸಂಗೀತದ ಇತಿಹಾಸದಲ್ಲೇ ಇಂದಿಗೂ ಅಜರಾಮರವಾಗಿ ಉಳಿದಿರುವವರು. ವಾಸುದೇವಾಚಾರ್ಯರು ಅವರ ಬಗ್ಗೆ ಬರೆಯುತ್ತಾ ಅವರ ಅಕ್ಕ ವೆಂಕಮ್ಮನವರ . ಬಗ್ಗೆಯೂ ಬರೆಯುತ್ತಾರೆ. "ಶೇಷಣ್ಣನವರು ಮಹಾನ್ ಸಂಗೀತಗಾರರಲು ಮೂರು ಮಂದಿ ಕಾರಣ. ಮೊದಲನೆಯವರು ಅವರ ಗುರುಗಳು. ಎರಡನೆಯವರು ಸ್ವತಃ ಅವರೇ (ನಿದ್ದೆ ಮಾಡುವಾಗ ಬಿಟ್ಟು ಉಳಿದ ಸಮಯವನ್ನೆಲ್ಲಾ ಸಂಗೀತ ಸಾಧನೆಗೇ ಮುಡಿಪಾಗಿಟ್ಟಿದ್ದರಂತೆ. ಆ ಸಾಧಕರು) ಮೂರನೆಯ ವ್ಯಕ್ತಿ ಅವರ ಅಕ್ಕ. ಆಕೆ ಸ್ವತಃ ಸಂಗೀತಗಾರ್ತಿಯಲ್ಲ. ಆದರೆ ಅವರಿಗೆ ಸಂಗೀತದ ಜ್ಞಾನ ಎಷ್ಟಿತ್ತೆಂದರೆ, ಹೆಜ್ಜೆ ಹೆಜ್ಜೆಗೂ ಆಕೆ ತಮ್ಮನನ್ನು ತಿದ್ದುತ್ತಿದ್ದರಂತೆ. ಒಮ್ಮೆ ಒಂದು ಸಂಗೀತ ಕಛೇರಿಗೆ ಹೋಗಿಬಂದ ಈ ಸ್ನೇಹಿತರು ಆ ಗಾಯಕನನ್ನು ವಿಪರೀತವಾಗಿ ಹೊಗಳುತ್ತಿದ್ದರಂತೆ. ಆಗ ವೆಂಕಮ್ಮ ಹೇಳಿದರಂತೆ "ಸಾಕು ಸಾಕು ಸಂಗೀತಕ್ಕೆ ಒಳ್ಳೆಯ ಕಂಠ, ರಾಗ,ತಾಳ ಅಷ್ಟಿದ್ದರೆ ಸಾಲದು. ರಾಗದ ಭಾವವನ್ನೂ ಸಾಹಿತ್ಯದ ಭಾವವನ್ನೂ ಅನುಭವಿಸಿ ಹಾಡಬೇಕು. ಅದು ಒಳ್ಳೆಯ ಸಂಗೀತ" ಎದರಂತೆ. ವಾಸುದೇವಾಚಾರ್ಯರು ಬರೆಯುತ್ತಾರೆ "ನನಗೆ ನಿಜವಾಗಿಯೂ ಆ ದಿನ ಒಳ್ಳೆಯ ಸಂಗೀತವೆಂದರೆ ಏನು ಎಂದು ಚಿಂತಿಸುವಂತೆ ಮಾಡಿದ್ದು ವೆಂಕಮ್ಮನವರ ಮಾತೇ" ಎನ್ನುತ್ತಾರೆ.

ಇಷ್ಟಕ್ಕೇ ವೆಂಕಮ್ಮನವರ ಜಾಣತನ ನಿಲ್ಲುವುದಿಲ್ಲ. ಆಕೆ ತಾವು ಅಡಿಗೆಮನೆಯಲ್ಲಿ ಕೆಲಸ ಮಾಡುತ್ತಿದ್ದಾಗಲೂ ತಮ್ಮನ ಸಂಗೀತದ ಬಗ್ಗೆಯೇ ಚಿಂತಿಸುತ್ತಿದ್ದರಂತೆ. ಮತ್ತು ಆಕೆಯ ಗಮನವೆಲ್ಲಾ ತಮ್ಮನ ಸಂಗೀತಾಭ್ಯಾಸದ ಕಡೆಗೇ. "ಯಾಕೆ ಶೇಷು ಅಪಸ್ವರ ನುಡಿಸುತ್ತಿದ್ದೀಯೆ. ಕೊನೆಯ ತಂತಿ ಸ್ವಲ್ಪ ಸಡಿಲಾಗಿದೆ ಬಿಗಿ ಮಾಡಿಕೋ. ಸ್ವರ ಪ್ರಸ್ತಾರವೇಕೆ ಎತ್ತೆತ್ತಲೋ ಚಲಿಸುತ್ತಿದೆ ಮನಸ್ಸು ಎಲ್ಲಿ ಹುಲ್ಲು ಮೇಯಲು ಹೋಗಿದೆ". ಈ ರಾಗವೇಕೋ ನಿನ್ನ ಮನದಾಳದಿಂದ ಬರುತ್ತಿಲ್ಲ ಶೇಷು. ಮೊನ್ನೆ ಇದೇ ರಾಗವನ್ನು ಎಂಥಾ ಚೆನ್ನಾಗಿ ನುಡಿಸಿದೆಯಲ್ಲಪ್ಪ". ಹೀಗೆ ವೆಂಕಮ್ಮನವರ ವಾಣಿ ತಮ್ಮನ ಸಾಧನೆಯನ್ನು ಹೆಜ್ಜೆ ಹೆಜ್ಜೆಗೂ ತಿದ್ದುತ್ತಿತ್ತು. ಹೀಗೆಲ್ಲ ಮಾರ್ಗ ದರ್ಶನ ಮಾಡಬೇಕಾದರೆ ಆಕೆಗೆ ಸಂಗೀತದ ಬಗ್ಗೆ ಆಮೂಲಾಗ್ರವಾಗಿ ತಿಳಿದಿರಲೇ ಬೇಕು. ಆದರೆ ಆಕೆಯ ಪಾಂಡಿತ್ಯ ಎಲ್ಲೂ ಬೆಳಕಿಗೆ ಬರಲೇ ಇಲ್ಲ. ಮತ್ತು ಅದು ವಾಸುದೇವಾಚಾರ್ಯರ ಕೃತಿಯಲ್ಲಿ ನಾಲ್ಕು ಸಾಲು ಬಂದಿರುವುದು ಬಿಟ್ಟರೆ ಮತ್ತೆಲ್ಲೂ ದಾಖಲಾಗಿಯೂ ಇಲ್ಲ.

ಸಂಗೀತವೆನ್ನುವುದು ಕೇವಲ ಗಂಡಸರ ಹಾಗೂ ದೇವದಾಸಿ ಮನೆತನದ ಹೆಣ್ಣು ಮಕ್ಕಳ ಸೊತ್ತಾಗಿದ್ದುದು, ಎಲ್ಲ ಹೆಣ್ಣುಮಕ್ಕಳಿಗೂ ಲಭಿಸುವಂತಾದುದು ಮೈಸೂರಿನ ಒಬ್ಬ ಮಹಾರಾಣಿಯವರಿಂದ ಎನ್ನುವ ಸತ್ಯ ಚರಿತ್ರೆಯಲ್ಲಿ ಎಲ್ಲೋ ಕಳೆದೇ ಹೋಗಿದೆ. ಇಂದಿಗೂ ಮೈಸೂರಿನಲ್ಲಿರುವ ಒಂದು ಬಡಾವಣೆಗೆ ಸೀತಾವಿಲಾಸ ಅಗ್ರಹಾರ ಎನ್ನುವ ಹೆಸರು ಬರುವುದಕ್ಕೆ ಕಾರಣರಾದ ಸೀತಾದೇವಿ ಎನ್ನುವ ರಾಜಮಹಿಳೆ. ಲಲಿತಕಲೆಗಳಿಗೆ ಪ್ರೋತ್ಸಾಹವನ್ನು ಅಪಾರವಾಗಿ ಕೊಡುತ್ತಿದ್ದ. ರಾಜರನ್ನು ಒಪ್ಪಿಸಿ, ಹೆಣ್ಣುಮಕ್ಕಳ ಶಾಲೆಯಲ್ಲಿ ಸಂಗೀತವನ್ನು ಒಂದು ವಿಷಯವಾಗಿ ಸೇರಿಸಿದ್ದರಿಂದ, ಮನೆಯಲ್ಲಿ ತಮ್ಮ ಇಂಪಾದ ಕಂಠದಿಂದ ಬರಿ ಸಂಪ್ರದಾಯದ ಹಾಡುಗಳನ್ನೇ ಹೇಳಿಕೊಳ್ಳುತ್ತಿದ್ದ ಹುಡುಗಿಯರು ಶಾಸ್ತ್ರೀಯ ಸಂಗೀತವನ್ನೂ ಕಲಿಯುವುದು ಸಾಧ್ಯವಾಯಿತು. ಈ ಶತಮಾನದ ಪ್ರಾರಂಭದಲ್ಲಿ ವಿದ್ವಾನ್ ವೀಣೆ ಪದ್ಮನಾಭಯ್ಯನವರು ಈ ಶಾಲೆಯಲ್ಲಿ ಗುರುಗಳಾಗಿದ್ದುದೂ, ಶ್ರೀರಂಗಮ್ಮ, ಕೆ.ಡಿ. ರುಕ್ಮಿಣಿಯಮ್ಮ, ಮುಂತಾದ ಶಿಷ್ಯೆಯರಿದ್ದುದೂ, ಈ ಮೇಲಿನ ಕೃತಿಯಿಂದ ತಿಳಿಯುತ್ತದಾದರೂ ಹೀಗೆ ಕಲಿತ ಹುಡುಗಿಯರು ಸಂಗೀತವನ್ನು ಅಭಿವೃದ್ಧಿ ಪಡಿಸಿಕೊಂಡರೆ, ಇವರಲ್ಲಿ ಮೊದಲು ಯಾರು ಬಹಿರಂಗವಾಗಿ ಕಚೇರಿ ಮಾಡಿದರು ಇತ್ಯಾದಿ ವಿವರ ಎಲ್ಲೂ ಸಿಕ್ಕುವುದಿಲ್ಲ.

ಹೀಗೆಯೇ ಎಲ್ಲ ಕಲಾ ಪ್ರಕಾರಗಳಲ್ಲೂ ನೂರು ವರ್ಷ ಹಿಂದಿನ ಕಲಾವಿದೆಯರನ್ನು ಹುಡುಕುವುದು ಕಷ್ಟವಾಗಿಯೇ ಉಳಿದಿದೆ. ಹಾಗೆಂದು ಹಿಂದೆ ಮಹಿಳೆಯರು ಕಲೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿಲ್ಲವೆಂದಲ್ಲ. ಇತಿಹಾಸವನ್ನು ಉಳಿಸಿಕೊಳ್ಳುವ ಶ್ರದ್ಧೆ ನಮಗಿಲ್ಲ ಅಷ್ಟೆ.

- *ಶತಭಿಷಾ*

ಮಹಿಳೆ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ - ಕರ್ನಾಟಕದ ವಿಶಿಷ್ಟ ಯೋಜನೆಗಳು

ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಅವರ ಉಳಿವು ರಕ್ಷಣೆ ಅಭಿವೃದ್ಧಿ ಮನುಕುಲದ ಅಭಿವೃದ್ಧಿಗೆ ಅವಶ್ಯಕವಾಗಿದೆ. ಮಕ್ಕಳ ಮೂಲಭೂತ ಅಗತ್ಯಗಳನ್ನು ಪೂರೈಸಿ ಅವರಿಗೆ ಜ್ಞಾನ ಮತ್ತು ಸಂಪನ್ಮೂಲಗಳನ್ನು ಒದಗಿಸಿ. ಸಜ್ಜುಗೊಳಿಸುವುದು ಅಭಿವೃದ್ಧಿಯ ಪ್ರಾಥಮಿಕ ಗುರಿ. ಆದ್ದರಿಂದಲೇ ಮಕ್ಕಳ ಮೂಲಭೂತ ಅಗತ್ಯಗಳನ್ನು ಪೂರೈಸಿ ಅವರಿಗೆ ಜ್ಞಾನ ಹಾಗೂ ಸಂಪನ್ಮೂಲಗಳನ್ನು ಒದಗಿಸುವುದು ಪ್ರಾಮುಖ್ಯವಾಗಿದೆ.

ಮಕ್ಕಳ ದುರವಸ್ಥೆಯನ್ನು ನಿವಾರಿಸಲು ಹಾಗೂ ಅವರ ಬೆಳವಣಿಗೆ ಮತ್ತು ಅಭಿವೃದ್ಧಿಗೆ " ಮಕ್ಕಳಿಗಾಗಿ ರಾಜ್ಯ ಕ್ರಿಯಾ ಯೋಜನೆ" ಯನ್ನು ರೂಪಿಸಿದೆ. ಇದು 1990ರಲ್ಲಿ ವಿಶ್ವಶೃಂಗ ಸಭೆಯಲ್ಲಿ ಜಾಗತಿಕ ಭ್ರಾತೃ ಸಂಘ ನೀಡಿದ ಆಶ್ವಾಸನೆಗಳಿಗೆ ಅನುಗುಣವಾಗಿದೆ. ಅದಕ್ಕನುಗುಣವಾಗಿ 1995ರಲ್ಲಿ ಹೆಣ್ಣುಮಗು ಮತ್ತು ಬಾಲಕಿಯ ಸ್ಥಾನಮಾನ ಸುಧಾರಣೆ ಮತ್ತು ಅವನತಿ ಹೊಂದುತ್ತಿರುವ ಲಿಂಗ ಅನುಪಾತವನ್ನು ವಿಪರ್ಯಾಸಗೊಳಿಸುವುದು ಔಪಚಾರಿಕ. ಅನೌಪಚಾರಿಕ ಮತ್ತು ಬದಲಿ ವ್ಯವಸ್ಥೆಯ ಮೂಲಕ ಅಂಗವಿಕಲರೂ ಸೇರಿದಂತೆ ಶೇ 100ರಷ್ಟು ಬಾಲಕಿಯರಿಗೆ ಪ್ರಾಥಮಿಕ ಶಿಕ್ಷಣ ಸೌಲಭ್ಯ ಅಂತೆಯೇ ಕನಿಷ್ಟ ಶೇ 80ರಷ್ಟು ತರುಣಿಯರಿಗಾದರೂ ವೈಯಕ್ತಿಕ ಆರೋಗ್ಯ ಸುಧಾರಣೆಯ ಅರಿವು ಮೂಡಿಸಿ ವಿಶೇಷ ಆರೋಗ್ಯ ಶಿಬಿರಗಳನ್ನು ಸ್ಥಾಪಿಸುವುದು ಹಾಗೂ ಶಾಲಾ ಶಿಕ್ಷಣವನ್ನು ಮುಂದುವರೆಸದ ಕನಿಷ್ಟ ಶೇ 50ರಷ್ಟು ತರುಣಿಯರಿಗೆ ಸ್ವಾವಲಂಬಿಗಳಾಗಲು ವೃತ್ತಿ ನೈಪುಣ್ಯತೆ ಒದಗಿಸುವುದು.

1995ರ ಅಂತ್ಯದ ವೇಳೆಗೆ ಜನನಪೂರ್ಣ ಧನುರ್ವಾಯು ಸೋಂಕನ್ನು ತಡೆಗಟ್ಟುವುದು. ಮಕ್ಕಳು ದಡಾರದಿಂದ ಸಾಯುವುದನ್ನು ಶೇ 95ರಷ್ಟು ಕಡಿಮೆ ಮಾಡುವುದು. ಪೋಲೀಯೋವನ್ನು ರಾಜ್ಯದ 10 ಜಿಲ್ಲೆಗಳಲ್ಲಿ ನಿವಾರಿಸುವುದು. ಅತಿಸಾರದಿಂದ ಸಾವುಗಳಲ್ಲಿ ಶೇ 50 ರಷ್ಟು ಇಳಿತ. ಅತಿಸಾರ ಪ್ರಕರಣಗಳನ್ನು ಶೇ 10ರಷ್ಟು ಇಳಿತ ಸಾಧಿಸುವುದು. ಜನಸಂಖ್ಯೆಯ ಶೇ 50ರಷ್ಟು ಜನರಿಗೆ ಎಚ್. ಐ. ವಿ. ಏಡ್ಸ್ ಬಗ್ಗೆ ಅರಿವು ಮೂಡಿಸುವುದು ಅಪೌಷ್ಠಿಕತೆಯ ಸಮಸ್ಯೆಯನ್ನು ನಿವಾರಿಸುವುದು ಕಬ್ಬಿಣಾಂಶದ ಕೊರತೆಯಿಂದ ಉಂಟಾಗುವ ರಕ್ತಹೀನತೆಯನ್ನು ಶೇ 10ರಷ್ಟು ಇಳಿಸುವುದು. ರೋಗಪೀಡಿತ ಪ್ರದೇಶಗಳಲ್ಲಿ ಅಯೋಡಿನ್ ಯುಕ್ತ ಉಪ್ಪಿನ ಬಳಕೆ ಹೆಚ್ಚಿಸಲು ಕ್ರಮ. ಶಿಶುಗಳಿಗೆ ಮೊದಲ 4-5 ತಿಂಗಳ ಅವಧಿಯಲ್ಲಿ ಕೇವಲ ಮೊಲೆ ಹಾಲು ಉಣಿಸುವುದರ ಮತ್ತು ಸಕಾಲದಲ್ಲಿ ಪೂರಕ ಆಹಾರ ನೀಡಲಾರಂಬಿಸುವುದರ ಪ್ರಾಮುಖ್ಯತೆಯ ಅರಿತು ಮೂಡಿಸುವುದು. ರಾಜ್ಯದಲ್ಲಿ 1000ಕ್ಕೂ ಹೆಚ್ಚು ಹೆರಿಗೆ ಆಸ್ಪತ್ರೆಗಳನ್ನು "ಶಿಶು ಮಿತ್ರ" ರೆಂದು ಪ್ರಮಾಣೀಕರಿಸುವುದು.

ಕರ್ನಾಟಕ ವಾರ್ತೆ

ಉದ್ಯೋಗದ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ

- ಹೇಮಲತಾ ಮಹಿಷಿ

ಮಹಿಳೆ ಅನುಭವಿಸುವ ಅತ್ಯಂತ ಅಪಮಾನಕರ ಮತ್ತು ಕಟು ಅನುಭವಗಳಲ್ಲಿ ಮೊದಲ ಸ್ಥಾನ ಲೈಂಗಿಕ ಕಿರುಕುಳಕ್ಕೆ ಸಲ್ಲುತ್ತದೆ. ಇತ್ತೀಚಿನ ವರ್ಷಗಳಲ್ಲಿ ವಿಶ್ವದಾದ್ಯಂತ ಸಹಸ್ರಾರು ಮಹಿಳೆಯರು ಮನೆಯಿಂದ ಹೊರಗೆ ಕಾಲಿಟ್ಟು ವಿವಿಧ ಉದ್ಯೋಗಗಳನ್ನು ಕೈಕೊಂಡಿದ್ದಾರೆ. ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಪ್ರಯತ್ನಿಸುತ್ತಿದ್ದಾರೆ. ಆ ಮೂಲಕ ಸಮಾನತೆಯನ್ನುಗಳಿಸಲು ಆಶಿಸುತ್ತಿದ್ದಾರೆ. ಮಹಿಳೆಯ ಈ ಅಸಂಪ್ರದಾಯಿಕ ಪಾತ್ರವನ್ನು ಇನ್ನೂ ಪೂರ್ಣವಾಗಿ ಒಪ್ಪಿಕೊಳ್ಳದ ಪುರುಷ ಸಮಾಜ ಅನೇಕ ರೀತಿಗಳಲ್ಲಿ ಮಹಿಳೆಯರಿಗೆ ಹೆಚ್ಚು ಘಾಸಿಯುಂಟುಮಾಡುವುದು ಲೈಂಗಿಕ ಕಿರುಕುಳ. ಅವರು ಕೆಲಸ ಮಾಡುವ ಜಾಗಗಳಲ್ಲಿ ಸಹೋದ್ಯೋಗಿ ಪುರುಷರಿಂದ ಉಂಟಾಗುತ್ತಿರುವ ಲೈಂಗಿಕ ಕಿರುಕುಳದ ಬಗ್ಗೆ ವಿಶ್ವದಾದ್ಯಂತ ಆತಂಕ ಉತ್ಪನ್ನವಾಗಿದೆ. ಪುರುಷರಿಗೂ ಕೆಲವೊಮ್ಮೆ ಲೈಂಗಿಕ ಕಿರುಕುಳ ಉಂಟಾದರೂ, ಅದು ಕ್ವಚಿತ್ತಾಗಿದ್ದು, ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ಗಣನೀಯವಾಗಿದೆ.

ಅಹಿತಕರವಾದ ಲೈಂಗಿಕ ಕಿರುಕುಳ ಉದ್ಯೋಗಸ್ಥ ಮಹಿಳೆಯ ಜೀವನವನ್ನು ದುರ್ಭರವಾಗಿಸುವುದಲ್ಲದೇ ಅವಳು ಆ ಕೆಲಸವನ್ನು ಬಿಟ್ಟು ಬೇರೆಡೆ ಕೆಲಸ ಹುಡುಕಿಕೊಂಡು ಹೋಗುವಂತೆ ಮಾಡುತ್ತದೆ. ತನಗಿಷ್ಟ ಬಂದ ಕೆಲಸ ಕೈಕೊಳ್ಳುವ ಅವಳ ಮೂಲಭೂತ ಹಕ್ಕನ್ನು ಇದು ಮೊಟಕುಗೊಳಿಸುತ್ತದೆ. ಮಾಲೀಕರಿಗೂ ತೊಂದರೆಯಾಗುತ್ತದೆ. ಕೆಲಸ ಮಾಡುವ ಜಾಗಗಳಲ್ಲಿ ಸೂಕ್ತ ವಾತಾವರಣವಿಲ್ಲದಿದ್ದರೆ, ಕೆಲಸಗಾರರು ಗೌರವದಿಂದ ಕೆಲಸ ಮಾಡಲು ಸಾಧ್ಯವಾಗದಿದ್ದರೆ ಅದರಿಂದ ಕೆಲಸಗಾರರ ಸಾಮರ್ಥ್ಯ ಕುಂಠಿತವಾಗಿ ಸಂಸ್ಥೆಗೂ ಹಾನಿಯಾಗುತ್ತದೆ. ಒಟ್ಟಾರೆಯಾಗಿ ದೇಶದ ಅಭಿವೃದ್ಧಿ ಹಿನ್ನಡೆ ಸಾಧಿಸುತ್ತದೆ.

ಭಾರತದಲ್ಲಿಯೂ ಮಹಿಳಾ ಕೆಲಸಗಾರರ ಸಂಖ್ಯೆ ಹೆಚ್ಚಾಗುತ್ತಿರುವ ಅಸಂಪ್ರದಾಯಿಕ ಕ್ಷೇತ್ರಗಳಲ್ಲಿ ಲೈಂಗಿಕ ಕಿರುಕುಳದ ಸಮಸ್ಯೆ ಆತಂಕಕಾರಿ ಹಂತವನ್ನು ಮುಟ್ಟಿದೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡಬೇಕಾಗಿರುವ ಮಹಿಳೆಯರಿಗೆ ಈ ಸಮಸ್ಯೆ ನುಂಗಲಾರದ ತುತ್ತಾಗಿದೆ. ಅದರಲ್ಲೂ ಸಮಾಜ ಸುಧಾರಣೆಯ ಯೋಜನೆಯ ಅಂಗವಾಗಿ ಕೆಲಸಮಾಡುತ್ತಿರುವ ಕುಟುಂಬ ಕಲ್ಯಾಣ ಯೋಜನೆಯ ಮಹಿಳಾ ಕೆಲಸಗಾರರು, ಗ್ರಾಮಸೇವಿಕೆಯರು, ದಾದಿಯರು, ಅಂಗನವಾಡಿ ಸಾಥಿನ್‌ಗಳು ಇಂತಹ ಲೈಂಗಿಕ ಕಿರುಕುಳದಿಂದಾಗಿ ಬಹಳಷ್ಟು ಕಷ್ಟಪಡುತ್ತಿದ್ದಾರೆ.

ಈಗಿರುವ ಕಾನೂನುಗಳು ಅಪರಾಧ ನಡೆದ ನಂತರ ಶಿಕ್ಷೆ ಕೊಡುವ ಕಾನೂನುಗಳಾಗಿವೆ. ಅಲ್ಲದೆ ಕಾನೂನು ಪ್ರಕ್ರಿಯೆಯ ಸಂಕೀರ್ಣತೆ ಹಾಗೂ ನ್ಯಾಯಲಯದಲ್ಲಿನ ವಿಳಂಬದಿಂದಾಗಿ ಅನ್ಯಾಯಕ್ಕೆ ಒಳಗಾದ ಮಹಿಳೆಯರಿಗೆ ಕಾನೂನಿನ ನೆರವು ಸಿಗುವುದು ದುರ್ಲಭ. ಈಗ ಉದ್ಯೋಗಸ್ಥ ಮಹಿಳೆಯರಿಗೆ ತುರ್ತಾಗಿ ಬೇಕಾಗಿರುವುದು ಲೈಂಗಿಕ ಕಿರುಕುಳವನ್ನು ತಡೆಗಟ್ಟುವ ನೀತಿ ಹಾಗೂ ವಿಧಾನ. ಸಹ ಉದ್ಯೋಗಿಗಳಲ್ಲಿ ಈ ಬಗ್ಗೆ ತಿಳುವಳಿಕೆ ಮೂಡಿಸುವ ಮೂಲಕ, ಮಾಲೀಕರು ಮೇಲಧಿಕಾರಿಗಳಲ್ಲಿ ಲೈಂಗಿಕ ವಿಚಾರಣೆಗೆ ಸರಳವಾದ ಬದಲಿ ಉದ್ಯೋಗ ನಡೆಸಿಕೊಂಡು ಹೋಗಲು ಸೂಕ್ತವಾದ ವಾತಾವರಣ ನಿರ್ಮಿಸಲು ಸಾಧ್ಯ.

ಇತ್ತೀಚೆಗೆ ರಾಜಸ್ಥಾನದ ಹಳ್ಳಿಯೊಂದರಲ್ಲಿ ಸಮಾಜ ಸೇವಿಕೆ ಭಾನ್ವರಿದೇವಿಯ ಮೇಲೆ ನಡೆದ ಅಮಾನುಷವಾದ ಗುಂಪು ಅತ್ಯಾಚಾರದ ಪ್ರಕರಣ ಲೈಂಗಿಕ ಕಿರುಕುಳದ ವಿರುದ್ಧ ತುರ್ತು ಕ್ರಮ ಕೈಕೊಳ್ಳಲು ಬಲವಾದ ಕಾರಣವಾಯಿತು. ಬಾಲ್ಯವಿವಾಹದ ವಿರುದ್ಧ ಜಾಗೃತಿ ಮೂಡಿಸಲು ಶ್ರಮಿಸಿದ ಬಾನ್ವರಿದೇವಿ ಊರ ಪುರುಷ ಮುಖಂಡರ ಕೋಪಕ್ಕೆ ತುತ್ತಾಗಿ ಗುಂಪು ಅತ್ಯಾಚಾರಕ್ಕೆ ಬಲಿಯಾಗಬೇಕಾಯಿತು. ಕೆಲವು ಸ್ತ್ರೀಪರ ವ್ಯಕ್ತಿಗಳು, ಸರ್ಕಾರೇತರ ಸಂಸ್ಥೆಗಳು ಈ ಪ್ರಸಂಗವನ್ನು ಸರ್ವೋಚ್ಚ ನ್ಯಾಯಾಲಯದ ಗಮನಕ್ಕೆ ತಂದು ಉದ್ಯೋಗಸ್ಥ ಮಹಿಳೆಯರಿಗೆ ಸಂವಿಧಾನದ ೧೪ ನೇ ಅನುಚ್ಛೇದ (ಸಮಾನತೆಯ ಹಕ್ಕು), ೧೯ ನೇ ಅನುಚ್ಛೇದ (ಉದ್ಯೋಗಕೈಕೊಳ್ಳುವ ಹಕ್ಕು) ಮತ್ತು ೨೧ ನೇ ಅನುಚ್ಛೇದ (ಜೀವಿಸುವ ಹಕ್ಕು) ದಲ್ಲಿರುವ ಮೂಲಭೂತ ಹಕ್ಕುಗಳನ್ನು ಅನುಭವಿಸಲು ಸೂಕ್ತ ರಕ್ಷಣೆ ಕೊಡಬೇಕೆಂದು ರಿಟ್ ಅರ್ಜಿ (ವಿಶಾಖ ವಿರುದ್ಧ ರಾಜಸ್ಥಾನ ಸರ್ಕಾರ) ಯೊಂದನ್ನು ದಾಖಲು ಮಾಡಿದಾಗ, ಸರ್ವೋಚ್ಚ ನ್ಯಾಯಾಲಯವು ಒಂದು ಮಹತ್ವದ ತೀರ್ಪನ್ನು ನೀಡಿದ್ದು, ಉದ್ಯೋಗ ಸ್ಥಳಗಳಲ್ಲಿ ಮಹಿಳಾ ಕೆಲಸಗಾರರಿಗೆ ಆಗುವ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಕೆಲವೊಂದು ಮಾರ್ಗದರ್ಶಿಸೂತ್ರಗಳನ್ನು ರೂಪಿಸಿಕೊಟ್ಟಿದೆ ಹಾಗೂ ಕೇಂದ್ರ ರಾಜ್ಯ ಸರ್ಕಾರಗಳು ಸೂಕ್ತವಾದ ಕಾನೂನನ್ನು ಮಾಡುವವರೆಗೆ ಆ ಸೂತ್ರಗಳೇ ಕಾನೂನಾಗಿರುತ್ತವೆಂದು ಘೋಷಿಸಿದೆ. ಭಾರತ ಸಂವಿಧಾನದ ಬೇರೆ, ಬೇರೆ ಅನುಚ್ಛೇದಗಳನ್ನು

ಆಧರಿಸಿರುವುದಲ್ಲದೇ ಈ ತೀರ್ಪು ಅನೇಕ ಅಂತಾರಾಷ್ಟ್ರೀಯ ಘೋಷಣೆಗಳ ಒಪ್ಪಂದಗಳ ನೆರವು ಪಡೆದಿರುವುದು ಮಹಿಳೆಯರ ಹಕ್ಕುಗಳನ್ನು ಮಾನವ ಹಕ್ಕುಗಳ ಭಾಗವಾಗಿ ಕಂಡಿರುವುದು ಇದರ ವಿಶೇಷತೆ.

ಮಾರ್ಗದರ್ಶಿ ಸೂತ್ರಗಳ ಮುಖ್ಯ ಅಂಶಗಳು :

ಕೆಲಸದ ಸ್ಥಳ ಅಥವಾ ಇತರ ಸಂಸ್ಥೆಗಳಲ್ಲಿ ಲೈಂಗಿಕ ಕಿರುಕುಳದ ಘಟನೆಗಳು ನಡೆಯದಂತೆ ನೋಡಿಕೊಳ್ಳುವುದು ತಡೆಗಟ್ಟುವುದು ಅದರ ಮಾಲೀಕರ ಅಥವಾ ಜವಾಬ್ದಾರಿಯುತ ವ್ಯಕ್ತಿಗಳ ಕರ್ತವ್ಯ ಹಾಗೂ ಅದರ ಪರಿಹಾರ. ಬಗೆ ಹರಿಸುವಿಕೆ ಮತ್ತು ಪ್ರಾಸಿಕ್ಯೂಷನ್ ಬಗ್ಗೆ ಎಲ್ಲ ಸೂಕ್ತಕ್ರಮಗಳನ್ನು ಕೈಕೊಂಡು ವಿಧಿ ವಿಧಾನಗಳನ್ನು ಕಲ್ಪಿಸುವುದೂ ಅವರ ಕರ್ತವ್ಯ ಎಂದು ತಿಳಿಸಲಾಗಿದೆ.

ಲೈಂಗಿಕ ಕಿರುಕುಳವನ್ನು ವ್ಯಾಖ್ಯಾನಿಸಿ ಕೆಳಕಂಡ ಯಾವುದೇ ಸ್ವಾಗತಾರ್ಹವಲ್ಲದ ಲೈಂಗಿಕ ಉದ್ದೇಶದ ನಡವಳಿಕೆ ಅದು ನೇರವಾಗಿರಬಹುದು ಅಥವಾ ಇಂಗಿತರೂಪದಲ್ಲಿರಬಹುದು ಅದರಲ್ಲಿ ಬರುತ್ತದೆ ಎಂದು ವಿವರಿಸಲಾಗಿದೆ.

ಎ) ದೈಹಿಕ ಸಂಪರ್ಕ ಮತ್ತು ಲೈಂಗಿಕ ಮುಂಬರಿಕೆ

ಬಿ) ಲೈಂಗಿಕ ಅನುಗ್ರಹ ತೋರಿಸಲು ಒತ್ತಾಯಿಸುವುದು ಅಥವಾ ಕೇಳಿಕೊಳ್ಳುವುದು

ಸಿ) ಲೈಂಗಿಕ ಛಾಯೆಯ ಟೀಕೆಗಳು

ಡಿ) ಅಶ್ಲೀಲ ಸಾಹಿತ್ಯ - ಚಿತ್ರವನ್ನು ತೋರಿಸುವುದು

ಇ) ಇನ್ಯಾವುದೇ ರೀತಿಯ ಸ್ವಾಗತಾರ್ಹವಲ್ಲದ, ಲೈಂಗಿಕ ಸ್ವಭಾವದ, ದೈಹಿಕ ಬಾಯಿಮಾತಿನ, ಬಾಯಿಮಾತಿನದಲ್ಲದ ನಡವಳಿಕೆ.

ಅದಕ್ಕೆ ಗುರಿಯಾದ ಮಹಿಳೆ ಸಂಬಳ ಗೌರವಧನ ಪಡೆಯುತ್ತಿರಬಹುದು ಅಥವಾ ಅವಳ ಕೆಲಸ ಸ್ವ ಇಚ್ಛೆಯುದಾಗಿರಬಹುದು : ಅವಳು ಸರ್ಕಾರಿ ಉದ್ಯೋಗದಲ್ಲಿರಬಹುದು. ಸಾರ್ವಜನಿಕ ಅಥವಾ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗದಲ್ಲಿರಬಹುದು : ಲೈಂಗಿಕ ಕಿರುಕುಳದ ಅಂತಹ ನಡವಳಿಕೆ ಅಪಮಾನಕಾರಕವಾಗಿರಬಹುದು. ಆರೋಗ್ಯದ ಸುರಕ್ಷತೆಯ ಸಮಸ್ಯೆಯನ್ನುಂಟು ಮಾಡಬಹುದು : ತನ್ನ ಉದ್ಯೋಗದ ಸಂಬಂಧವಾಗಿ ಮಹಿಳೆಗೆ ಭೀತಿಯುಂಟು ಮಾಡುವ ನಡವಳಿಕೆ ಅದಾಗಿರಬಹುದು. ಪ್ರತಿಭಟಿಸಿದಲ್ಲಿ ತನ್ನನ್ನು ಕೆಲಸಕ್ಕೆ ತೆಗೆದುಕೊಳ್ಳುವುದರ ಬಗ್ಗೆ ಅಥವಾ ತನ್ನ ಮುಂಬಡ್ತಿಯ ವಿಷಯದಲ್ಲಿ ತನಗೆ ಅನಾನುಕೂಲ ಪರಿಸ್ಥಿತಿ ಸೃಷ್ಟಿಸಬಹುದು ಎಂದು ಅವಳು ಹೆದರಬಹುದು. ಅಥವಾ ಕೆಲಸ ಮಾಡುವ ಜಾಗದಲ್ಲಿ ಪ್ರತಿಕೂಲ ಪರಿಸ್ಥಿತಿ ಸೃಷ್ಟಿಸಬಹುದು.

ಲೈಂಗಿಕ ಕಿರುಕುಳವನ್ನು ತಡೆಗಟ್ಟುವ ಕ್ರಮವಾಗಿ ಮಾಲೀಕರು. ಮೇಲ್ವಿಚಾರಕರು ಕೈಕೊಳ್ಳಬೇಕಾದ ಕೆಳಕಂಡ ಕ್ರಮಗಳನ್ನು ಸೂಚಿಸಲಾಗಿದೆ :

ಎ) ಸೂಕ್ತ ಸ್ಥಳಗಳಲ್ಲಿ ಮೇಲ್ಕಂಡ ರೀತಿಯ ಲೈಂಗಿಕ ಕಿರುಕುಳದ ನಿಷೇಧವನ್ನು ಪ್ರಕಟಿಸಬೇಕು ಮತ್ತು ಸುತ್ತೋಲೆ ಕಳಿಸಬೇಕು:

ಬಿ) ನಡವಳಿಕೆ ಮತ್ತು ಶಿಸ್ತುಕ್ರಮಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ನಿಯಮಗಳನ್ನು ಮಾಡಿ. ಅಪರಾಧಿಗೆ ಸೂಕ್ತ ದಂಡನೆಯನ್ನು ಅದರಲ್ಲಿ ಸೇರಿಸಬೇಕು.

ಸಿ) ಕೆಲಸ, ಬಿಡುವು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಸೂಕ್ತ ವಾತಾವರಣ ಕಲ್ಪಿಸಿ. ಮಹಿಳೆಯರಿಗೆ ಕೆಲಸ ಮಾಡುವ ಜಾಗಗಳಲ್ಲಿ ಪ್ರತಿಕೂಲ ವಾತಾವರಣ ಇಲ್ಲದಂತೆ ನೋಡಿಕೊಳ್ಳಬೇಕು. ಲೈಂಗಿಕ ಕಿರುಕುಳ ತಡೆಗಟ್ಟಲು ಸೂಕ್ತಕ್ರಮ ಕೈಗೊಂಡಾಗ್ಯೂ ಅಂತಹ ಕೃತ್ಯ ನಡೆದರೆ ಮಾಲೀಕರು. ಮೇಲ್ವಿಚಾರಕರು ಕೈಗೊಳ್ಳಬೇಕಾದ ಕ್ರಮಗಳು.

೧) ಅಂತಹ ಕೃತ್ಯ ಭಾರತ ದಂಡ ಸಂಹಿತೆಯ ಪ್ರಕಾರ ಅಪರಾಧವಾದರೆ, ಮಾಲೀಕರು ಮೇಲಧಿಕಾರಿಗಳು ಸೂಕ್ತ ಅಧಿಕಾರಿಗೆ ದೂರು ಕೊಡಬೇಕು.

ಕೃತ್ಯಕ್ಕೆ ಬಲಿಯಾದ ಮಹಿಳೆಯಾಗಲೀ, ಸಾಕ್ಷಿಗಳಾಗಲೀ ಬಲಿಪಶುವಾಗದಂತೆ, ತಾರತಮ್ಯನೀತಿಗೆ ಗುರಿಯಾಗದಂತೆ ನೋಡಿಕೊಳ್ಳಬೇಕು. ಆ ಮಹಿಳೆ ತನ್ನನ್ನು ಆ ಜಾಗದಿಂದ ವರ್ಗಾವಣೆ ಮಾಡುವಂತೆ ಅಥವಾ ಕಿರುಕುಳ ಕೊಟ್ಟ ಪುರುಷ ಸಹೋದ್ಯೋಗಿಯನ್ನು ಅಲ್ಲಿಂದ ಬೇರೆಡೆ ವರ್ಗಾವಣೆ ಮಾಡುವಂತೆ ಕೇಳಬಹುದು.

೨) ಸೇವಾ ನಿಯಮಗಳ ಅನುಸಾರ ಅಂತಹ ನಡವಳಿಕೆ ದುರ್ನಡತೆ ಎನ್ನಿಸಿದರೆ ಮಾಲೀಕರು ಮೇಲಾಧಿಕಾರಿಗಳು ಅಂತಹ ವ್ಯಕ್ತಿಯ ವಿರುದ್ಧ ಶಿಸ್ತುಕ್ರಮ ಕೈಕೊಳ್ಳಬೇಕು.

ಬದಲಿ ವ್ಯವಸ್ಥೆ : ಅಂತಹ ಲೈಂಗಿಕ ಕಿರುಕುಳ ಕಾನೂನಿನ ಪ್ರಕಾರ ಅಪರಾಧವಾಗಲೀ ಆಗದಿರಲಿ. ಸೇವಾನಿಯಮಗಳ ಉಲ್ಲಂಘನೆಯಾಗಲೀ ಆಗದಿರಲಿ. ಮಹಿಳಾ ಉದ್ಯೋಗಿಯ ದೂರಿಗೆ ಪರಿಹಾರ ಕಂಡು ಹಿಡಿಯಲು ಆ ಸಂಸ್ಥೆಯಲ್ಲಿಯೇ ಒಂದು ಸೂಕ್ತ ದೂರುವಿಚಾರಣಾಯಂತ್ರವನ್ನು ರಚಿಸಬೇಕು ಹಾಗೂ ಪ್ರತಿದೂರಿಗೆ ಸೂಕ್ತ ಅವಧಿಯಲ್ಲಿ ಪರಿಹಾರ ದೊರಕಬೇಕು. ಈ ಬದಲಿ ವ್ಯವಸ್ಥೆಯೆಂದರೆ, ಒಂದು ದೂರು ಸಮಿತಿಯ ರಚನೆಯಾಗಿ ಅದರ ಅಧ್ಯಕ್ಷರು ಮಹಿಳೆಯಾಗಿರಬೇಕು. ಅರ್ಧಕ್ಕೂ ಕಡಿಮೆಯಿಲ್ಲದಂತೆ, ಅದರ ಸದಸ್ಯರು ಮಹಿಳೆಯಾಗಿರಬೇಕು. ಮೇಲಿನವರ ಒತ್ತಡ ಬೀಳದಂತೆ ನೋಡಿಕೊಳ್ಳಲು ಆ ಸಮಿತಿಯಲ್ಲಿ ಸ್ವಾಯತ್ತ ಸಂಸ್ಥೆಗಳ ಅಥವಾ ಈ ವಿಷಯಕ್ಕೆ ಸಂಬಂದಿಸಿದ ಸಂಸ್ಥೆಗಳ ಪ್ರತಿನಿಧಿಗಳೂ ಇರಬೇಕು. ಈ ಸಮಿತಿ ಬೇರೆ ಪರಿಣತರ ಸಹಾಯವನ್ನೂ ಪಡೆಯಬಹುದು. ಆದರೆ, ವಿಷಯದ ಗೌಪ್ಯತೆಯನ್ನು ಉಳಿಸಿಕೊಳ್ಳಬೇಕು.

ದೂರುಸಮಿತಿ ದೂರು ಹಾಗೂ ತಾವು ಕೈಕೊಂಡ ಕ್ರಮದ ಬಗ್ಗೆ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಅದೇ ರೀತಿ ಮಾಲೀಕರು ಹಾಗೂ ಮೇಲಧಿಕಾರಿ ಮೇಲ್ಕಂಡ

ಮಾರ್ಗದರ್ಶಿಸೂತ್ರದ ಪಾಲನೆ ಹಾಗೂ ದೂರು ಸಮಿತಿಯ ಬಗ್ಗೆ ವರದಿಯನ್ನು ಸರ್ಕಾರದ ಇಲಾಖೆಗೆ ಸಲ್ಲಿಸಬೇಕು.

ಕೆಲಸಗಾರರ, ಕಾರ್ಮಿಕರ ಸಭೆಗಳಲ್ಲಿ ಇಂತಹ ಲೈಂಗಿಕ ಕಿರುಕುಳದ ಬಗ್ಗೆ ಚರ್ಚೆಗಳಾಗಬೇಕು. ಅದೇ ರೀತಿ ಮಾಲೀಕರು ನೌಕರರ ಸಭೆಗಳಲ್ಲೂ ಈ ವಿಷಯವನ್ನು ಎತ್ತಬೇಕು.

ಸಹೋದ್ಯೋಗಿಗಳಲ್ಲದ ಮೂರನೆಯ ವ್ಯಕ್ತಿಗಳಿಂದ ಮಹಿಳಾ ನೌಕರರಿಗೆ ಉದ್ಯೋಗದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ ಉಂಟಾದರೆ, ಮಾಲಿಕರು ಮೇಲಾಧಿಕಾರಿಗಳು ಅದನ್ನು ತಡೆಗಟ್ಟಲು ಸೂಕ್ತಕ್ರಮ ಕೈಕೊಳ್ಳಬೇಕು.

ಈ ತೀರ್ಪಿನ ಮೂಲಕ ಸರ್ವೋಚ್ಚನ್ಯಾಯಾಲಯವು ಕೇಂದ್ರ ರಾಜ್ಯ ಸರ್ಕಾರಗಳ ಈ ಮಾರ್ಗದರ್ಶಿ ಸೂತ್ರಗಳ ಪಾಲನೆಯ ಬಗ್ಗೆ ಸೂಕ್ತ ಕಾನೂನು ಮಾಡುವುದರ ಬಗ್ಗೆ ಕ್ರಮ ಕೈಕೊಳ್ಳಬೇಕೆಂದು ತಿಳಿಸಿದೆ. ಈ ಮಾರ್ಗದರ್ಶಿ ಸೂತ್ರಗಳಲ್ಲದೇ ಮಹಿಳೆ ೧೯೯೭ ರ ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮದಡಿಯೂ ತನ್ನ ಹಕ್ಕುಗಳನ್ನು ರಕ್ಷಿಸಿಕೊಳ್ಳಬಹುದಾಗಿದೆ.

ಈ ಮಾರ್ಗದರ್ಶಿ ಸೂತ್ರಗಳನ್ನು ನ್ಯಾಯಾಲಯಗಳು ಈಗಾಗಲೇ ಅನುಷ್ಠಾನಕ್ಕೆ ತಂದಿದ್ದು ಸೌದಿ ಅರೇಬಿಯನ್ ಏರ್‌ಲೈನ್ಸನಲ್ಲಿ ಕೆಲಸದಲ್ಲಿದ್ದು ಮೇಲಾಧಿಕಾರಿಗಳು ಲೈಂಗಿಕ ಕಿರುಕುಳದ ಬಗ್ಗೆ ದೂರು ನೀಡಿದ್ದಕ್ಕಾಗಿ ಕೆಲಸ ಕಳೆದುಕೊಂಡಿದ್ದ ಷೆಹನಾಜ್ ಮುಂದ್‌ಭಟ್ಕಲ್‌ಗೆ ಮುಂಬಯಿ ಉಚ್ಚ ನ್ಯಾಯಾಲಯ ಕೆಲಸ ಮರಳಿ ದೊರಕುವಂತೆ ನ್ಯಾಯದಾನ ನೀಡಿದೆ. ಅದೇರೀತಿ. ಸರ್ವೋಚ್ಚ ನ್ಯಾಯಾಲಯ ಇತ್ತೀಚೆಗೆ ಮತ್ತೊಂದು ಪ್ರಕರಣದಲ್ಲಿ ಲೈಂಗಿಕ ಕಿರುಕುಳಕ್ಕೆ ಗುರಿಯಾಗಿದ್ದ ಮಹಿಳೆಗೆ ನ್ಯಾಯ ದೊರಕಿಸಿ ಕೊಟ್ಟಿದೆ : ಲೈಂಗಿಕ ಕಿರುಕುಳವೆಂದರೆ ಏನೆಂದು ಸ್ಪಷ್ಟವಾಗಿ ಅರ್ಥೈಸಿದೆ. ಆದರೆ, ವಿಶಾಖಾ ಮೊಕದ್ದಮೆಯ ತೀರ್ಪು ಹೊರಬಂದು ಒಂದು ವರ್ಷದ ಮೇಲಾದರೂ ಇನ್ನೂವರೆಗೆ ಸರ್ಕಾರದಲ್ಲಾಗಲೀ, ಸಾರ್ವಜನಿಕ ಖಾಸಗಿ ಸಂಸ್ಥೆಗಳಲ್ಲಾಗಲೀ ದೂರು ಸಮಿತಿಯ ರಚನೆಯಾಗಿಲ್ಲ. ಮಹಿಳೆಯರಿಗೂ ಮಾರ್ಗದರ್ಶಿಸೂತ್ರಗಳ ಬಗ್ಗೆ ಅರಿವು ಉಂಟಾಗಿಲ್ಲ. ಸೇವಾ ನಿಯಮಗಳಲ್ಲಿ ತಿದ್ದುಪಡಿಯಾಗಿಲ್ಲ. ಆಗಬೇಕಾದ ಕೆಲಸ ಇನ್ನೂ ಸಾಕಷ್ಟಿದೆ.

MAG (2) PRS.DECL.370/98-99
BOOK POST/ PERIODICALS

To :
Sri/Smt

ACHALA - Edited by N. Gayathri, Published By Dr. G. Ramakrishna on behalf of Jagruthi Mahila Adhyayana Kendra, 713, Vijaya Mansion , I Main, R.P.C Layout, Bangalore - 560 040
Printed by Lipi Mudrana, Bangalore - 560 004